ಕನ್ನಡಪ್ರಭ
ಶನಿವಾರ 9.05.2026

ಗರಿಷ್ಠ 31°c | ಕನಿಷ್ಠ 21°c

ಸುದ್ದಿ ಸಿಂಚನ

ಅಕ್ರಮ ಮದ್ಯ ಮಾರಾಟ

ಕಡೂರು: ಪೊಲೀಸ್ ಠಾಣೆಯ ಪಿ.ಎಸ್ಸೈ. ಲೀಲಾವತಿ ಮತ್ತು ಠಾಣಾ ಸಿಬ್ಬಂದಿ ಖಚಿತ ಮಾಹಿತಿ ಮೇರೆಗೆ ಕಡೂರು ಠಾಣಾ ವ್ಯಾಪ್ತಿಯ ಬೀರನಹಳ್ಳಿ ಗ್ರಾಮದ ವಾಸುದೇವ ನಾಯ್ಕ ಅವರು ತಮ್ಮ ಮನೆ ಮುಂದಿನ ರಸ್ತೆ ಬದಿಯಲ್ಲಿ ಸಾರ್ವಜನಿಕರಿಗೆ ಬಿಡಿ ಮದ್ಯ ಮಾರಾಟ ಮಾಡುತ್ತಾ ಕುಡಿಯಲು ಅವಕಾಶ ಕಲ್ಪಿಸಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ದಾಳಿ ಮಾಡಿ ಆತನ ಬಳಿ ಇದ್ದ 90 ಎಂ.ಎಲ್. ನ 5 ಬಿಡಿ ಮದ್ಯದ ಪೌಚ್ ಗಳು ಮತ್ತಿತರ ಪರಿಕರ ವಶಪಡಿಸಿಕೊಂಡಿದ್ದಾರೆ.

ಮರು ಚುನಾವಣೆಯೇ ಸೂಕ್ತ ಪರಿಹಾರ: ರಿತಿನ್

ನರಸಿಂಹರಾಜಪುರ: ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಚುನಾವಣೆ ಫಲಿತಾಂಶದಲ್ಲಿ ತೀವ್ರ ಗೊಂದಲ ಉಂಟಾಗುತ್ತಿರುವುದರಿಂದ ಮರು ಚುನಾವಣೆ ಮಾಡುವುದು ಸೂಕ್ತ ಪರಿಹಾರ ಎಂದು ಎಂದು ಆಮ್ ಆದ್ಮಿ ಪಕ್ಷದ ಯುವ ಘಟಕದ ರಾಜ್ಯ ಉಪಾಧ್ಯಕ್ಷ ರಿತಿನ್ ರಾಜು ಪಾಲ್ ಸಲಹೆ ನೀಡಿದ್ದಾರೆ. ಪತ್ರಿಕಾ ಹೇಳಿಕೆ ನೀಡಿ, ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಇತ್ತೀಚಿನ ಬೆಳವಣಿಗೆ ಹಿನ್ನೆಲೆಯಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಇತರ



ಪಕ್ಷಗಳ ಬೆಂಬಲಿಗರಲ್ಲಿ ತೀವ್ರ ಗೊಂದಲ ಹಾಗೂ ಅಸಮಾಧಾನ ಉಂಟಾಗಿದೆ. ಮತದಾರರ ವಿಶ್ವಾಸ ಕಾಪಾಡುವುದು, ಪ್ರಜಾ ಪ್ರಭುತ್ವದ ಮೌಲ್ಯಗಳನ್ನು ಉಳಿಸುವುದು ಅತ್ಯಂತ ಮುಖ್ಯ. ಈ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಮರು ಮತ ದಾನ ಮಾಡಬೇಕು ಎಂದು ಆಮ್ ಆದ್ಮಿ ಪಕ್ಷ ಒತ್ತಾಯಿಸುತ್ತದೆ. ಪಾರದರ್ಶಕ ಮತ್ತು ನ್ಯಾಯ ಸಮ್ಮತ ಚುನಾವಣೆ ಮೂಲಕ ಜನರಿಗೆ ಸ್ಪಷ್ಟತೆ ದೊರೆಯಬೇಕು. ಯಾವುದೇ ಅನುಮಾನಗಳಿಗೆ ಅವಕಾಶ ಇರಬಾರದು. ರಾಜ್ಯ ಚುನಾವಣಾ ಆಯೋಗ, ಸಂಬಂಧಿತ ಅಧಿಕಾರಿಗಳು ತಕ್ಷಣ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ತೆಗೆದು ಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಮಗು, ಗೃಹಿಣಿ ನಾಪತ್ತೆ

ಚಿಕ್ಕಮಗಳೂರು: ಗೃಹಿಣಿಯೊಬ್ಬರು ತನ್ನ 2 ವರ್ಷದ ಮಗುವಿನೊಂದಿಗೆ ನಾಪತ್ತೆಯಾಗಿರುವುದಾಗಿ ಆಲ್ದೂರು ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಹಾಸನದ ಸೈಯ್ಯದ್ ಮುಬಿನ್ ಎಂಬುವವರ ಪತ್ನಿ ರಾಬಿಯಾ ತರನಮ್ ಎಂಬವರೇ ನಾಪತ್ತೆಯಾದವರು. ಈಕೆ ಇತ್ತೀಚೆಗೆ ತನ್ನ ತವರು ಮನೆ ಹಾಂದಿ ಗ್ರಾಮಕ್ಕೆ ತನ್ನ ನಾಲ್ಕು ಮಕ್ಕಳೊಂದಿಗೆ ಆಗಮಿಸಿದ್ದು, ಮೇ 4 ರಂದು ತನ್ನ ಕೊನೆ ಮಗು 2 ವರ್ಷದ ಇಕ್ರಾ ಫಾತಿಮಾ ಜತೆಗೆ ನಾಪತ್ತೆಯಾಗಿದ್ದಾರೆ. ಈ ಬಗ್ಗೆ ತರನಮ್ ತಾಯಿ ರಹಮತ್ ಉನ್ನೀಸಾ ಪೊಲೀಸರಿಗೆ ದೂರು ನೀಡಿದ್ದಾರೆ. 32ವರ್ಷದ ರಾಬಿಯಾ ತರನಮ್ ದುಂಡುಮುಖ, ಬಿಳಿಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದಾರೆ. ಈಕೆ ಹಾಗೂ ಮಗುವಿನ ಬಗ್ಗೆ ಮಾಹಿತಿ ಇದ್ದವರು ಆಲ್ದೂರು ಪೊಲೀಸ್ ಠಾಣೆ ಗೆ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.



ಅಡಕೆ ಧಾರಣೆ

ಶಿವಮೊಗ್ಗ

- ಸರಕು............... 55199 - 85559
- ಬೆಟ್ಟೆ................. 56572 - 61899
- ರಾಶಿಇಡಿ............ 45069 - 55611
- ಗೊರಬಲು.......... 19010 - 41799

ಕಾಫಿ ಧಾರಣೆ

- ಅರೇಬಿಕಾ ಪಾರ್ಚ್‌ಮೆಂಟ್........23,000
- ಅರೇಬಿಕಾ ಚೆರ‍್ರಿ.....................14,000
- ರೋಬಸ್ಟಾ ಪಾರ್ಚ್‌ಮೆಂಟ್.......18,150
- ರೋಬಸ್ಟಾ ಚೆರ‍್ರಿ.......................9,775

ರಬ್ಬರ್ ಧಾರಣೆ

- ಆರ್‌ಎಸ್‌ಎಸ್ (4)................252.50
- ಆರ್‌ಎಸ್‌ಎಸ್ (5)................246.00
- ಲಾಟ್ ಶೀಟ್.......................217.00



ಬಾಳೆಹೊನ್ನೂರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯಡಿ ಕಾರ್ಯನಿರ್ವಹಿಸಿ ವರ್ಗಾವಣೆಗೊಂಡ ಮೇಲ್ವಿಚಾರಕ ಮೋಹನ್‌ರನ್ನು ಸೇವಾನಿರತ ಪ್ರತಿನಿಧಿಗಳು ಗೌರವಿಸಿ ಬೀಳ್ಕೊಟ್ಟರು. ಯೋಜನಾಧಿಕಾರಿ ಶ್ರೀಮೂರ್ತಿ ಶೆಟ್ಟಿ, ನೂತನ ಮೇಲ್ವಿಚಾರಕಿ ಅನಿತಾ, ಸೇವಾನಿರತ ಪ್ರತಿನಿಧಿಗಳು ಹಾಜರಿದ್ದರು.



ಕೊಪ್ಪ ಸರ್ಕಾರಿ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್ ಭಾರತ್ ಸ್ಕೌಟ್ಸ್- ಗೈಡ್ಸ್, ರೇಂಜರ್ಸ್ ಇತರ ಘಟಕಗಳ ಸಮಾರೋಪ ಸಮಾರಂಭದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಬಿ.ಎಸ್ ಈಶ್ವರಪ್ಪ ಬೆಳ್ಳಾಲೆ, ಎಂ.ಕೆ. ಚಂದ್ರಶೇಖರ್‌ಮುರೊಳ್ಳಿ, ಜುಬೇರ್‌ಅಹಮದ್, ಅಭಿಲಾಷ್ ಇದ್ದರು.

10ಕ್ಕೆ ಕೊಪ್ಪ ಕನ್ನಡೋತ್ಸವ

ಕೊಪ್ಪ: ಮಾತೃಶ್ರೀ ಸುಭದ್ರಮ್ಮ ಮಂಜುನಾಥ ಭಟ್ ಸ್ಮರಣಾರ್ಥ ಕೊಪ್ಪ ಮಂಜುನಾಥ್ ಭಟ್ ಪ್ರತಿಷ್ಠಾನದಿಂದ ಮಲೆನಾಡ ಮಡಿಲಲಿ ಕನ್ನಡೋತ್ಸವ ಮೇ.10 ರಂದು ಹುಲ್ಲುಮಕ್ಕಿಯ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ ಬೆಳಗ್ಗೆ 10 ರಿಂದ ನಡೆಯಲಿದೆ ಎಂದು ಅಧ್ಯಕ್ಷೆ ರೂಪಕಲಾ ತಿಳಿಸಿದ್ದಾರೆ. ಕನ್ನಡ ಭಾಷೆ,ಸಾಹಿತ್ಯ -ಸಂಸ್ಕೃತಿ ಅಭಿವೃದ್ಧಿ ಹಾಗೂ ಪ್ರಸಾರ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸ ಲಾಗಿದೆ. ಪ್ರತಿಷ್ಠಾನ 2ನೇ ವರ್ಷಕ್ಕೆ ಕಾಲಿಡುತ್ತಿದೆ. ಈ ಕಾರ್ಯ ಕ್ರಮದಲ್ಲಿ ಸಾಹಿತ್ಯ, ಸಮಾಜಸೇವೆ, ಶಿಕ್ಷಣ,ಸಾಂಸ್ಕೃತಿಕಕ್ಷೇತ್ರ ಗಳಲ್ಲಿ ಸಾಧನೆ ಮಾಡಿದ, ಎಲೆ ಮರೆಯಸಾಧಕತಪಸ್ವಿಗಳು,ಯುವಪ್ರತಿಭೆಗಳನ್ನು ಗೌರವಿಸಲಾಗುತ್ತದೆ. ಡಾ. ಅನಿತ ರಾವ್‌ರಿಂದ 'ಒತ್ತಡದ ಜೀವನದಲ್ಲಿ ಮಹಿಳೆಯರ ಆರೋಗ್ಯ ಸಮಸ್ಯೆ - ಪರಿಹಾರ' ವಿಷಯ ಉಪನ್ಯಾಸ, ಕೃತಿ ಬಿಡುಗಡೆ, ಗೀತ ಗಾಯನ, ಹಾಸ್ಯ ಪ್ರಸಂಗ, ನಾಟಕ, ಕವಿಗೋಷ್ಠಿ, ಆಯೋಜಿಸಲಾಗಿದೆ. ಸಾಹಿತಿ ಪ್ರಭಾಕರ ಕಾರಂತರು ಅಧ್ಯಕ್ಷತೆ ವಹಿಸಲಿದ್ದು,ಮಂಗಳ ನಾಡಿಗ್, ಶಾರದಾ ಉಳುವೆ, ನಾ ಸುರೇಶ್ ಕಲ್ಕೆರೆ, ತೈರೊಳ್ಳಿ ಮಂಜುನಾಥ ಉಡುಪ ಮುಂತಾದವರು ಭಾಗವಹಿಸುವರು.

ಮೀಸಲಾತಿ ಹೆಚ್ಚಳಕ್ಕೆ ಸರ್ವ ಪಕ್ಷ ನಿಯೋಗ ತೆರಳಲಿ

ವಾಲ್ಮೀಕಿ ಸಮುದಾಯ ಮುಖಂಡ ವಿ.ಎಸ್. ಉಗ್ರಪ್ಪ ಆಗ್ರಹ | ಸಿಎಂ ನೇತೃತ್ವದ ತಂಡ ಪ್ರಧಾನಿಗೆ ಒತ್ತಡ ಹಾಕಲಿ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಎಸ್ಸಿ,ಎಸ್ಟಿ, ಒಬಿಸಿ ಮೀಸಲಾತಿಯನ್ನು ಶೇ.56ಕ್ಕೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದರೆ ಸಾಲದು ಕೇವಲ ಪತ್ರಗಳಿಗೆ ಮಾವಿನ ಕಾಯಿ ಉದುರುವುದಿಲ್ಲ. ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ವ ಪಕ್ಷ ನಿಯೋಗದೊಂದಿಗೆ ತೆರಳಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಒತ್ತಡ ಹಾಕಿ ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸುವ ಕೆಲಸ ಮಾಡಬೇಕಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ವಾಲ್ಮೀಕಿ ಸಮುದಾಯ ಮುಖಂಡ ವಿ.ಎಸ್. ಉಗ್ರಪ್ಪ ಆಗ್ರಹಿಸಿದ್ದಾರೆ.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿ ಮೀಸಲಾತಿ ಪ್ರಮಾಣ ಶೇ.56ಕ್ಕೆ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ 2023ರಲ್ಲಿ ಬಸವರಾಜ ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ, ಈ ಕಾಯ್ದೆಗೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಿದೆ. ಮೀಸಲಾತಿ ಹೆಚ್ಚಳವಾಗಬೇಕಾದರೆ ಕೇಂದ್ರ ಸರ್ಕಾರ ಇದನ್ನು ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಸೇರಿಸಿ ಊರ್ಜಿತಗೊಳಿಸಬೇಕು. ಆಗ ಮೀಸಲಾತಿ ಸೌಲಭ್ಯ ದೊರೆಯಲಿದೆ. ಆದರೆ, ಕಳೆದ 3 ವರ್ಷದಿಂದ ಪ್ರಯತ್ನಿಸಿದರೂ ಸಾಧ್ಯವಾಗುತ್ತಿಲ್ಲ.

ಮೀಸಲಾತಿ ಹೆಚ್ಚಳವನ್ನು ಕೇಂದ್ರ ಸರ್ಕಾರ ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸುತ್ತಿಲ್ಲ. ಮತ್ತೊಂದು ಕಡೆ ಕಾಯ್ದೆ ಜಾರಿಗೆ ಹೈಕೋರ್ಟ್‌ನ ತಡೆಯಾಜ್ಞೆ ತೆರವಿಗೆ ರಾಜ್ಯ ಸರ್ಕಾರ ಪ್ರಯತ್ನಿಸುತ್ತಿಲ್ಲ. ಈ ಸರ್ಕಾರಗಳ ಆಲಸ್ಯಕ್ಕೆ ಎಸ್ಸಿ,ಎಸ್ಟಿ, ಒಬಿಸಿ ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ ಎಂದರು.

ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಹಾಗೂ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಿದರೂ ಕೇಂದ್ರ ಸರ್ಕಾರ ಪರಿಗಣಿಸಿಲ್ಲ. ಕೇಂದ್ರದ ಮೇಲೆ ರಾಜ್ಯ ಸರ್ಕಾರ ಒತ್ತಡ ಹಾಕುವ ಕೆಲಸ ಮಾಡಬೇಕು. ಆ ನಿಟ್ಟಿನಲ್ಲಿ ಸರ್ವ ಪಕ್ಷ ಸಭೆ ಕರೆಯಬೇಕು. ಜತೆಗೆ, ಸರ್ವ ಪಕ್ಷದ ನಿಯೋಗ ಕೊಂಡೊಯ್ಯುಬೇಕು ಎಂದು ಹೇಳಿದರು.

ರಾಜ್ಯದಲ್ಲಿ ಸುಮಾರು ಪರಿಶಿಷ್ಟ ಪಂಗಡದ 50 ಲಕ್ಷ, ಪರಿಶಿಷ್ಟ ಜಾತಿಯ 1.25 ಕೋಟಿ ಮತ್ತು ಹಿಂದುಳಿದ ವರ್ಗಗಳ 2.25 ಕೋಟಿ ಜನರು ಇದ್ದಾರೆ. ಮೀಸಲಾತಿ ಭಿಕ್ಷೆಯಲ್ಲ. ಹಾಗೆಂದರೆ ಅದು ಮೂರ್ಖತನದ ಪರಮಾವಧಿ. ಇದು ಪ್ರತಿ ಪ್ರಜೆಯ ಮೂಲಭೂತ ಹಕ್ಕು. ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳು ಸೇರಿದಂತೆ ಎಲ್ಲರೂ ಮೀಸಲಾತಿ ಪಡೆಯುತ್ತಿದ್ದಾರೆ ಎಂದರು.

ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಮೀಸಲಾತಿ ಪ್ರಮಾಣ ಹೆಚ್ಚಿಸಿತು. ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ನಾವು ಈ ಹೆಚ್ಚಳ ಊರ್ಜಿತ ಆಗಬೇಕಾದರೆ ಸಂವಿಧಾನದ ಷೆಡ್ಯೂಲ್ 9ಕ್ಕೆ ಸೇರಿಸಬೇಕು ಎಂದು ಕೋರಿದ್ದೆವು. ಸರ್ಕಾರದ ಮುಖ್ಯ ಕಾರ್ಯದರ್ಶಿ ಕೇಂದ್ರ ಸರ್ಕಾರ ಈ ವಿಚಾರವಾಗಿ ಪತ್ರ ಬರೆದರು. ಕೇಂದ್ರ ಸರ್ಕಾರ ಈ ವಿಚಾರ ಗೃಹ ಇಲಾಖೆಗೆ ಬರುವುದಿಲ್ಲ. ಬುಡಕಟ್ಟು ಮತ್ತು ಸಮಾಜ ಕಲ್ಯಾಣ ಇಲಾಖೆಗೆ ಈ ವಿಚಾರ ಬರುತ್ತದೆ ಎಂದು ಪ್ರತಿಕ್ರಿಯಿಸಿತು. ಆದರೆ ಬೊಮ್ಮಾಯಿ ಸರ್ಕಾರ ಮತ್ತು ಇಂದಿನ ಸಿದ್ದರಾಮಯ್ಯ ಸರ್ಕಾರ ಕೇಂದ್ರದ ಪತ್ರಕ್ಕೆ ಪ್ರತಿಕ್ರಿಯಿಸಲೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಕೋಲಿ, ಕುರುಬ, ಗೊಲ್ಲಸಮಾಜವನ್ನು ಎಸ್‌ಟಿಗೆ ಸೇರುತ್ತೇವೆ ಎನ್ನುತ್ತಾರೆ. ನಾವು ಯಾವ ಸಮಾಜದ ವಿರೋಧಿಗಳೂ ಅಲ್ಲ. ಆದರೆ ಕುಲಶಾಸ್ತ್ರಿಯ ಅಧ್ಯಯನ ಮಾಡಿಸಿ ಸೇರಿಸಬೇಕು. ನಂತರ ಜನ ಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿ ಜನರು ಒಳಮೀಸಲಾತಿ ಕಿತ್ತಾಡುವ ಬದಲು ನಾವೆಲ್ಲರೂ ಸೇರಿ ಪರಿಶಿಷ್ಟ ಜಾತಿ ಜನರ ಮೀಸಲಾತಿ ಶೇ.17ಕ್ಕೆ, ಪಂಗಡ ಮೀಸಲಾತಿ ಶೇ 7ಕ್ಕೆ ಹೆಚ್ಚಿಸಲು ಒಗ್ಗಟ್ಟಿನಿಂದ ಹೋರಾಟ ಮಾಡಬೇಕು. ಪ್ರಧಾನಿ ನರೇಂದ್ರ ಮೋದಿ ಅವರೇ ಶೇ 7.5ರಷ್ಟಿರುವ ಜನರಿಗೆ ತರಾತುರಿಯಲ್ಲಿ ಶೇ.10 ಮೀಸಲಾತಿ ಕೊಡುವಿರಿ. ಆದರೆ, ಈ ದೇಶದ ಮೂಲ ನಿವಾಸಿ ಗಳಾದ ನಮಗೆ ಮೀಸಲಾತಿ ಹೆಚ್ಚಳ ಮಾಡುತ್ತಿಲ್ಲ. 9ನೇ ಷೆಡ್ಯೂಲ್‌ಗೆ ಏಕೆ ಸೇರಿಸುತ್ತಿಲ್ಲ ಏಕೆ ಎಂದು ಪ್ರಶ್ನಿಸಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರ ಚೆಲ್ಲಾಟವಾಡಬೇಡಿ. ರಾಜಕೀಯವಲ್ಲ, ಬದುಕಿನ ಪ್ರಶ್ನೆ. ಸಾಮಾಜಿಕ ಬದ್ಧತೆ ತೋರಬೇಕು. ಮೀಸಲಾತಿ ಹೆಚ್ಚಳದ ವಿಚಾರವಾಗಿ ಹೈಕೋರ್ಟ್‌ನಲ್ಲಿರುವ ತಡೆಯಾಜ್ಞೆ ತೆರವಿಗೆ ಕ್ರಮವಹಿಸಬೇಕು ಎಂದು ಕೋರಿದರು.



ನಗರದ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ವಿ.ಎಸ್. ಉಗ್ರಪ್ಪ ಮಾತನಾಡಿದರು.

ವಿವಿಧ ವರ್ಗಗಳ ತಾಳ್ಮೆ ಪರೀಕ್ಷೆ ಮಾಡಬೇಡಿ

ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಎಸ್ಸಿ,ಎಸ್ಟಿ, ಒಬಿಸಿ ವರ್ಗದ ಜನರ ತಾಳ್ಮೆ ಪರೀಕ್ಷೆ ಮಾಡಬೇಡಿ. ಕೇವಲ ಪತ್ರ ಬರೆವ ಮೂಲಕ ಸಮಸ್ಯೆ ಪರಿಹಾರವಾಗಲ್ಲ. ಈ ಸಮಸ್ಯೆಗೆ ಶೀಘ್ರ ಪರಿಹಾರ ರೂಪಿಸಲಿಲ್ಲ ಎಂದರೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿರುದ್ಧ, ಹಕ್ಕುಗಳ ರಕ್ಷಣೆಗೆ ಹೋರಾಟ ಮಾಡಬೇಕಾಗಲಿದೆ.

• **ವಿ.ಎಸ್.ಉಗ್ರಪ್ಪ** ಉಪಾಧ್ಯಕ್ಷ, ಕೆಪಿಸಿಸಿ

ತಕ್ಕಪಾಠ ಕಲಿಸುತ್ತೇವೆ

ಸಚಿವ ಕೆ.ಜೆ.ಜಾರ್ಜ್, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ಶಾಸಕ ತಮ್ಮಯ್ಯ ಹಾಗೂ ಸಂಸದ ಕೋಟಾ ಶ್ರೀನಿವಾಸ್ ಪೂಜಾರಿ ಸೇರಿದಂತೆ ಎಲ್ಲ ರಾಜಕಾರಣಿಗಳು ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೇಲೆ ಒತ್ತಡ ಹಾಕುವ ಕೆಲಸ ಮಾಡಬೇಕು. ಇಲ್ಲವಾದರೆ ಮುಂದಿನಗಳಲ್ಲಿ ತಕ್ಕ ಪಾಠ ಕಲಿಸಬೇಕಾಗಲಿದೆ.

ವೋಟ್ ಬ್ಯಾಂಕ್‌ಗಾಗಿ ಸುಳ್ಳು ಜಾತಿ ಪತ್ರ

ರಾಜ್ಯದಲ್ಲಿ ಸುಮಾರು 3.5 ಲಕ್ಷ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ನೀಡಲಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಸುಳ್ಳು ಜಾತಿ ಪ್ರಮಾಣ ವಿತರಣೆ ಮಾಡಿದವರು ಹಾಗೂ ಪಡೆದವರು ವಿರುದ್ಧ ಕ್ರಮ ಕೈಗೊಳ್ಳಬೇಕು. ಈಗಾಗಲೇ ರಾಜ್ಯ ಸರ್ಕಾರ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಬೇಡಿ ಎಂದು ಸೂಚಿಸಿದೆ. ಆದರೆ, ರಾಜ್ಯದಲ್ಲಿ ಮತ ಬ್ಯಾಂಕ್‌ಗಾಗಿ, ರಾಜಕಾರಣಿಗಳಿಂದಲೇ ಸುಳ್ಳು ಜಾತಿ ಪ್ರಮಾಣ ಪತ್ರ ಕೊಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಉಗ್ರಪ್ಪ ಆರೋಪಿಸಿದರು.

ಒಳಮೀಸಲಾತಿಯಿಂದ ಶಾಶ್ವತ ಪರಿಹಾರ ಅಸಾಧ್ಯ

ಒಳಮೀಸಲಾತಿಯಿಂದ ಶಾಶ್ವತ ಪರಿಹಾರ ನೀಡಲು ಸಾಧ್ಯವಿಲ್ಲ. ಯಾವುದೇ ಜಾತಿ ಹಿಂದುಳಿದೆ ಎಂಬುದನ್ನು ಗುರುತಿಸಿ ಅವರಿಗೆ ಹೆಚ್ಚಿನ ಒತ್ತು ಕೊಡಿ. ತರಬೇತಿ ನೀಡಬೇಕು. ಆ ಮೀಸಲಾತಿಯಡಿ ಎಲ್ಲ ವರ್ಗಗಳಿಗೂ ಸಮಾನ ಅವಕಾಶ ನೀಡಬೇಕು. ಆ ಮೂಲಕ ಮುಖ್ಯವಾಹಿನಿಗೆ ತರಬೇಕು. ಸೌಲಭ್ಯ ನೀಡುವ ಕೆಲಸ ಮಾಡಿದಾಗ ಮಾತ್ರ ಪರಿಹಾರವಾಗಲಿದೆ ಎಂದು ವಿ.ಎಸ್.ಉಗ್ರಪ್ಪ ಹೇಳಿದರು.

ಚುನಾವಣಾ ಆಯೋಗದ ಅಧಿಕಾರಿಗಳಿಂದ ಅಂಚೆ ಮತ ಟ್ಯಾಂಪರಿಂಗ್: ಉಗ್ರಪ್ಪ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಚುನಾವಣಾ ಆಯೋಗ ಮತ್ತು ಆಯೋಗದ ಅಧಿಕಾರಿಗಳು ಶೃಂಗೇರಿ ವಿಧಾನಸಭಾ ಕ್ಷೇತ್ರ ಅಂಚೆ ಮತ ಮರು ಎಣಿಕೆಯಲ್ಲಿ ಟ್ಯಾಂಪರಿಂಗ್ ಮಾಡಿ ತಮ್ಮ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಕೆಲಸ ಮಾಡಿದ್ದಾರೆ ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಆರೋಪಿಸಿದ್ದಾರೆ.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕುತಂತ್ರ ಮತ್ತು ಷಡ್ಯಂತ್ರ ಮಾಡಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿ ಕೊಳ್ಳುವ ಕೆಲಸ ಮಾಡಲಾಗಿದೆ ಎಂದರು.

ಕಳೆದ 2023ರಲ್ಲಿ ವಿಧಾನಸಭೆ ಚುನಾವಣೆ ನಡೆದಾಗ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿ ಇತ್ತು. ಚುನಾವಣೆ ಸಂದರ್ಭದಲ್ಲಿ ಯಾವುದೇ ಲೋಪ ಉಂಟಾದರೆ, ಆಯೋಗಕ್ಕೆ ದೂರು ನೀಡಬೇಕಾಗಿತ್ತು. ಆದರೆ, ಯಾವುದೇ ದೂರು ನೀಡಿಲ್ಲ. ಜತೆಗೆ, ಅಂಚೆ ಮತ ಎಣಿಕೆ ಸಂದರ್ಭದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಎಲ್ಲ ಚುನಾವಣಾ ಅಭ್ಯರ್ಥಿಗಳು ಮತ ಎಣಿಕೆ ಸರಿಯಾಗಿದೆ ಎಂದು ಒಪ್ಪಿ ಸಹಿ ಮಾಡಿದ್ದಾರೆ. ಆಗ ಯಾಕೆ ಡಬ್ಬಲ್ ಎಂಟ್ರಿ ಕಾಣಿಸಲಿಲ್ಲ? ಎಂದು ಉಗ್ರಪ್ಪ ಪ್ರಶ್ನಿಸಿದ್ದಾರೆ.

ಮತ ಎಣಿಕೆ ನಂತರ ಮತ ಪತ್ರ ಹಾಗೂ ಇವಿಎಂಗಳನ್ನು ಸೀಲ್ ಮಾಡಿ ಚುನಾವಣಾ ಆಯೋಗ ತನ್ನ ಭದ್ರತೆಯಲ್ಲಿ ಸಂರಕ್ಷಣೆ ಮಾಡಿಕೊಳ್ಳುತ್ತದೆ. ಹಾಗಾದರೆ, 2023ರಲ್ಲಿ ಸಿಂಧು ಆಗಿದ್ದ ಮತಗಳು ಮರು ಎಣಿಕೆಯಲ್ಲಿ ಹೇಗೆ ಅಸಿಂಧು ಆಗಿವೆ. ಇದರಲ್ಲ ಸ್ಪಷ್ಟವಾಗಿ ಅಂಚೆ ಮತ ಪತ್ರ ಟ್ಯಾಂಪರಿಂಗ್ ಆಗಿರುವುದು ಕಂಡು ಬರುತ್ತಿದೆ ಎಂದು ಹೇಳಿದರು.

ಶಂಕರಾಚಾರ್ಯರ ಸಿದ್ಧಾಂತ ಮೈಗೂಡಿಸಿಕೊಳ್ಳಬೇಕು: ಗಿರೀಶ್

• **ಕನ್ನಡಪ್ರಭ ವಾರ್ತೆ** ನರಸಿಂಹರಾಜಪುರ

ಶಂಕರರ ಸಿದ್ಧಾಂತಗಳನ್ನು ಅರಿತು ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಮೈಗೂಡಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕು ಎಂದು ವಾಗ್ಮಿ ಗಿರೀಶ್ ಉಳುವೆ ಕರೆ ನೀಡಿದರು.

ಕಾನೂರು ಕುಮಾರಸ್ವಾಮಿ ಮನೆಯಂಗಳದಲ್ಲಿ ಶೃಂಗೇರಿ ಶಿಷ್ಯ ಮಲೆನಾಡು ಹೆಬ್ಬಾರ ಬ್ರಾಹ್ಮಣ ಸಭಾದ ಎನ್.ಆರ್.ಪುರ ಘಟಕ-ಯುವಹೆಬ್ಬಾರ ಬಳಗ, ಕಾನೂರು ಶ್ರೀ ರಾಮ ಸೇವಾ ಭಜನಾ ಮಂಡಳಿ ಸಂಯುಕ್ತಾ ಶ್ರಯದಲ್ಲಿ ನಡೆದ ಶಂಕರ ಜಯಂತಿಯಲ್ಲಿ ಉಪನ್ಯಾಸ ನೀಡಿದರು. ಹಿಂದೂ ಧರ್ಮ ಜಗತ್ತಿನಲ್ಲೇ ಶ್ರೇಷ್ಠ ಹಾಗೂ ಪುರಾತನ ಧರ್ಮವಾಗಿದೆ. ಹಿಂದೂ ಧರ್ಮದ ಸಂಸ್ಕೃತಿ ಎಲ್ಲಾ ಧರ್ಮಗಳಿಗೂ ಅನುಕರಣೀಯ. ಮೌಲ್ಯಯುತ ಬದುಕು ನಡೆಸುವುದನ್ನು ಭಾರತೀಯ ಸಂಸ್ಕೃತಿ ಕಲಿಸಿದೆ ಎಂದರು.



ಭಗವಂತನಲ್ಲಿ ಎಲ್ಲವೂ ಇದೆ. ಆದ್ದರಿಂದ ಭಗವಂತ ನಮ್ಮಿಂದ ನಿರೀಕ್ಷೆ ಮಾಡುವುದು ಭಕ್ತಿ ಮಾತ್ರ. ಪ್ರತಿಯೊಬ್ಬರಲ್ಲೂ ದೇವರಿದ್ದಾನೆ. ಹಾಗಾಗಿ ಯಾರ ಮನಸ್ಸಿಗೂ ನೋವಾಗದಂತೆ ಬದುಕಬೇಕು. ನಿಂದಕರನ್ನು ಸಹ ಕ್ಷಮಿಸು ವಂತಹ ವ್ಯಕ್ತಿತ್ವ ನಮ್ಮದಾಗಬೇಕು ಎಂದರು.

ಹೆಬ್ಬಾರ ಬ್ರಾಹ್ಮಣ ಸಭಾದ ಎನ್.ಆರ್.ಪುರ ತಾಲೂಕು ಘಟಕದ ಅಧ್ಯಕ್ಷ ಎ.ವಿ.ಪ್ರಶಾಂತ್ ಪ್ರಾಸ್ತಾವಿಕವಾಗಿ ಮಾತನಾಡಿ, ಹೆಬ್ಬಾರ ಬ್ರಾಹ್ಮಣ ಸಭಾದ ಸಂಘಟನೆಗೆ ಕಾರಣರಾದ ಹೆಬ್ಬಿಗೆ ಚಂದ್ರಶೇಖರ್‌ಅವರನ್ನು ಇಂದು ನೆನೆಯಬೇಕಾಗಿದೆ. ಶಂಕರಾಚಾರ್ಯರನ್ನು ಕೇವಲ ಒಂದು ದಿನದ ಮಟ್ಟಿಗೆ ನೆನೆಯದೆ ಪ್ರತಿ ದಿನವೂ ಆರಾಧಿಸಬೇಕು. ಅತ್ಯಂತ ಕಿರಿಯ ವಯಸ್ಸಿನಲ್ಲಿ ಶಂಕರಾಚಾರ್ಯರು ಮಾಡಿದ ಸಾಧನೆ ನೋಡಿದರೆ ಅವರು ದೈವೀ ಸ್ವರೂಪರಾಗಿದ್ದರು. ಹಿಂದೂ ಧರ್ಮದ ಉಳಿವಿಗೆ ಶಂಕರಾಚಾರ್ಯರು ಕಾರಣರಾಗಿದ್ದಾರೆ ಎಂದರು.

ಅಧ್ಯಕ್ಷತೆಯನ್ನು ಕಾನೂರು ಗ್ರಾಮದ ಹೆಬ್ಬಾರ ಬ್ರಾಹ್ಮಣ ಸಮಾಜದ ಮುಖಂಡ ಕೆ.ಆರ್.ಕುಮಾರ ಸ್ವಾಮಿ ವಹಿಸಿದ್ದರು. ಹೆಬ್ಬಾರ ಬ್ರಾಹ್ಮಣ ಸಭಾದ ಕಾರ್ಯದರ್ಶಿ ಕೆ.ವಿ.ಪ್ರಭಾಕರ, ಖಜಾಂಚಿ ಕೆ.ಆರ್.ಶಿವಕುಮಾರ್ ಇತರರು ಇದ್ದರು.

ಶಿಕ್ಷಣ ಪಡೆವುದು ಪ್ರತಿಯೊಬ್ಬರ ಹಕ್ಕು: ನ್ಯಾ.ಆರ್.ಎಸ್.ಜೀತು

ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಪ್ರತಿಭಾ ಪುರಸ್ಕಾರ



ಶೃಂಗೇರಿ ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ನ್ಯಾ.ಆರ್.ಎಸ್.ಜೀತು ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಶೃಂಗೇರಿ

ಶಿಕ್ಷಣ, ಸಂಸ್ಕೃತಿ ಇಲ್ಲದ ಮನುಷ್ಯನಿಗೆ ಸಮಾಜದಲ್ಲಿ ಬೆಲೆ ಇಲ್ಲ. ಇಂದು ಪ್ರತಿಯೊಂದು ಕ್ಷೇತ್ರದಲ್ಲಿಯೂ ಶಿಕ್ಷಣ ಪಡೆದ ವ್ಯಕ್ತಿಗಳಿಗೆ ಮಾತ್ರ ಗೌರವ ಮನ್ನಣೆ ಸಿಗುತ್ತಿದೆ. ಆದ್ದರಿಂದ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಶಿಕ್ಷಣ ಪಡೆಯುವುದು ಪ್ರತಿಯೊಬ್ಬರ ಹಕ್ಕು ಎಂದು ಶೃಂಗೇರಿ ಸಿವಿಲ್ ಹಾಗೂ ಜೆಎಂಎಫ್ ಸಿ ನ್ಯಾಯಾಲಯದ ನ್ಯಾಯಾಧೀಶ ಆರ್.ಎಸ್.ಜೀತು ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ರೋಟರಿ, ಇನ್ನರ್‌ವ್ಹೀಲ್, ವಕೀಲರ ಸಂಘದ ಸಹಯೋಗದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಿದ್ಯಾವಂತರಿಗೆ ಎಲ್ಲೆಡೆ ಗೌರವ ಸಿಗುತ್ತದೆ. ವಿದ್ಯೆಯು ವಿನಯ, ವಿವೇಕ, ಶಿಸ್ತು, ಪ್ರಾಮಾಣಿಕತೆ ಮೂಡಿಸುತ್ತದೆ. ಶಿಕ್ಷಣ ಪಡೆಯುವುದು ಪ್ರತಿ ವ್ಯಕ್ತಿಯ ಮೂಲ ಕರ್ತವ್ಯ. ಯಾರು ಶಿಕ್ಷಣದಿಂದ ವಂಚಿತರಾಗಬಾರದು.

ವಿದ್ಯಾರ್ಥಿಗಳು ಕಲಿಕೆ ದಿನಗಳಲ್ಲಿ ಉದಾಸಿನ, ನಿರ್ಲಕ್ಷ್ಯ ತೋರಬಾರದು. ಸಮಯ ವ್ಯರ್ಥಗೊಳಿಸದೇ ಸದ್ಬಳಕೆ ಮಾಡಿಕೊಂಡು ಸತತ ಅಧ್ಯಯನದಲ್ಲಿ ತೊಡಗಿ ನಿರಂತರ ಪರಿಶ್ರಮ ಪಡಬೇಕು. ಏಕಾಗ್ರತೆ, ಮನಸ್ಸಿನ ಮೇಲೆ ನಿಯಂತ್ರಣ ಸಾದಿಸಬೇಕು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದು ಅಗತ್ಯ. ಅವರ ಸಾಧನೆಗೆ ಇನ್ನಷ್ಟು ಸ್ಪೂರ್ತಿ ನೀಡಿದಂತಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಎಸ್‌ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಶೇ 95 ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ನಿವೃತ್ತಿ ಹೊಂದುತ್ತಿರುವ ಶೃಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಭಾರತಿ ಯವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಎಂ.ಸ್ವಾಮಿ, ರೋಟರಿ ಸಂಸ್ಥೆಯ ಎ.ವಿ.ಸುಬ್ರಮಣ್ಯ, ಇನ್ನರ್‌ವ್ಹೀಲ್ ನ ಮಂಜುಳಾ,ವಕೀಲರ ಸಂಘದ ಮಹೇಶ್, ಬಿಇಒ ವರಲಕ್ಷ್ಮಿ,ಪ್ರಿಯದರ್ಶಿನಿ,ರತ್ನ ಮತ್ತಿತರರು ಇದ್ದರು.


ಕನ್ನಡ ನಾಡಿನ ಅಸ್ಮಿತೆ | ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ತಾಲೂಕು ಕಸಾಪ ಅಧ್ಯಕ್ಷ ರವಿ ದಳವಾಯಿ

ಕನ್ನಡ ಭಾಷೆ, ಸಾಹಿತ್ಯ ಪ್ರಸಾರವೇ ಕಸಾಪ ಪ್ರಮುಖ ಉದ್ದೇಶ

• **ಕನ್ನಡಪ್ರಭ ವಾರ್ತೆ** ತರೀಕೆರೆ

ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ ಮತ್ತು ನಾಡು ನುಡಿ ಸಂರಕ್ಷಣೆ ಹಾಗೂ ಪ್ರಸಾರವೇ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯ ಉದ್ದೇಶ ಎಂದು ತಾಲೂಕು ಕಸಾಪ ಅಧ್ಯಕ್ಷ ರವಿ ದಳವಾಯಿ ಹೇಳಿದ್ದಾರೆ.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು , ಜಿಲ್ಲಾ ಕಸಾಪ, ತರೀಕೆರೆ ತಾಲೂಕು ಕಸಾಪ ಹಾಗೂ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಸಹಯೋಗದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮೈಸೂರು ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿದರು. ಸರ್. ಎಂ. ವಿಶ್ವೇಶ್ವರಯ್ಯ, ಶೇಷಾದ್ರಿ ಅಯ್ಯರ್ ಮುಂತಾದ ಮಹನೀಯರು ಕಸಾಪಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಉತ್ತೇಜನ ನೀಡಿ ದರು. ಪರಿಷತ್ತು ಅಂದರೆ ಶ್ರದ್ಧೆ, ಸಾಹಿತ್ಯ ಎಂದರೆ ಜೀವನ, ಕನ್ನಡ ಎಂದರೆ ಅದು ನಮ್ಮ ನಾಡಿನ ಅಸ್ಮಿತೆ ಎಂದು ಹೇಳಿದರು.



ತರೀಕೆರೆಯಲ್ಲಿ ತಾಲೂಕು ಕಸಾಪ ಸಮಾರಂಭವನ್ನು 20ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಡಾ.ಎಚ್.ಎಂ.ಮರುಳಸಿದ್ದಯ್ಯ ಪಟೇಲ್ ಉದ್ಘಾಟಿಸಿದರು. ತಾ.ಕಸಾಪ ಅಧ್ಯಕ್ಷ ರವಿ ದಳವಾಯಿ, ಕನ್ನಡಶ್ರೀ ಬಿ.ಎಸ್.ಭಗವಾನ್ ಮತ್ತಿತರರು ಭಾಗವಹಿಸಿದ್ದರು.

20ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಡಾ.ಎಚ್.ಎಂ.ಮರುಳ ಸಿದ್ದಯ್ಯ ಪಟೇಲ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಬೆಳೆಸಬೇಕು. ನಾಡು ನುಡಿ ಉಳಿಸಿ ಬೆಳೆಸಿ ಕನ್ನಡ ಸಾಹಿತ್ಯಕ್ಕೆ ಹೆಚ್ಚು ಉತ್ತೇಜನ ಕೊಡಬೇಕು ಎಂದು ಹೇಳಿದರು.

ಕನ್ನಡಶ್ರೀ ಬಿ.ಎಸ್.ಭಗವಾನ್ ಮಾತನಾಡಿ ಕಸಾಪ ಸ್ವಾತಂತ್ರ್ಯ ಪೂರ್ವದಿಂದಲೇ ವಿಶಿಷ್ಟ ಕೊಡುಗೆ ನೀಡಿದೆ. ಕನ್ನಡ ಭಾಷೆ ಬಹು ವಿಸ್ತಾರವಾಗಿವಾಗಿ ಬೆಳೆದಿದೆ. ಕನ್ನಡ ಭಾಷೆ ಉಪಯೋಗಿಸಬೇಕು, ಕನ್ನಡ ನಾಡು ವಿಶಾಲವಾದ ಪ್ರಾಂತ್ಯ ಹೊಂದಿದೆ, ಕನ್ನಡ ಭಾಷೆ ಅತ್ಯಂತ ಸಾರಭರಿತ ಭಾಷೆ ಎಂದು ಹೇಳಿದರು.

ಶರಣ ಸಾಹಿತ್ಯ ಪರಿಷತ್ತು ಪ್ರಧಾನ ಕಾರ್ಯದರ್ಶಿ, ಶಿಕ್ಷಕ ಚೇತನ್ ಗೌಡರು ಉಪನ್ಯಾಸ ನೀಡಿ ಮಾತನಾಡಿ ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ಅವರು ಕೈಗಾರಿಕೆ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆಗೆ ಅಪಾರದ ಕೊಡುಗೆ ನೀಡಿದ್ದಾರೆ, ವಾಣಿ ವಿಲಾಸ ಸಾಗರವನ್ನು ರೈತಾಪಿ ಜನಸಮುದಾಯಕ್ಕೆ ನೀರಾವರಿ ಕಲ್ಪಿಸುವ ಮೂಲಕ ಆಹಾರ ಉತ್ಪಾದನೆಗೆ ಪ್ರೋತ್ಸಾಹ ನೀಡಿದ್ದಾರೆ ಎಂದು ಹೇಳಿದರು.

ಕನ್ನಡಸಾಹಿತ್ಯ ಪೂರ್ವಾಧ್ಯಕ್ಷ ನಾಗೇನಹಳ್ಳಿ ತಿಮ್ಮಯ್ಯ ಮಾತನಾಡಿದರು. ಕಸಾಪ ಮಹಿಳಾ ಘಟಕ ಅಧ್ಯಕ್ಷೆ ಸುನಿತಾ ಕಿರಣ್, ಪ್ರಕೃತಿಶ್ರೀ ಕಲಾ ಕುಟೀರ ಅಧ್ಯಕ್ಷೆ ಉಮಾ ಪ್ರಕಾಶ್, ಕಸಾಪ ಲಕ್ಕವಳ್ಳಿ ಹೋಬಳಿ ಘಟಕ ಅಧ್ಯಕ್ಷ ಸಿ.ಚಕ್ರವರ್ತಿ, ಕಸಾಪ ಕೋಶಾಧ್ಯಕ್ಷರು ಕೆ.ಎಸ್.ಶಿವಣ್ಣ, ನವೀನ್, ಚಂದ್ರಶೇಖರ್ ವಿಭೂತಿ ಭಾಗವಹಿಸಿದ್ದರು.

ಸುದ್ದಿ ಸಿಂಚನ

ಭೂಮಾಪಕರ ಮುಷ್ಕರದಿಂದ ರೈತರಿಗೆ ಸಂಕಷ್ಟ: ರಾಜೇಶ್

ಶೃಂಗೇರಿ: ವಿವಿಧ ಬೇಡಿಕೆ ಮುಂದಿಟ್ಟು ಕಳೆದೆರಡು ತಿಂಗಳಿಂದ ರಾಜ್ಯಾದ್ಯಾಂತ ಭೂಮಾಪಕರು ನಡೆಸುತ್ತಿರುವ ಮುಷ್ಕರ ದಿಂದ ಕೆಲಸ ಕಾರ್ಯಗಳು ನಡೆಯದೇ ರೈತರಿಗೆ ಸಂಕಷ್ಟ ಉಂಟಾಗುತ್ತಿದೆ ಎಂದು ತಾಲೂಕು ಬಿಜೆಪಿ ರೈತಮೋರ್ಚ ಅಧ್ಯಕ್ಷ ಮೇಘಳಬೈಲು ರಾಜೇಶ್ ಆರೋಪಿಸಿದ್ದಾರೆ.



ನೇಮಕಾತಿ,ಸಮಾನ ಕೆಲಸಕ್ಕೆ ಸಮಾನ ವೇತನ ಸೇರಿದಂತೆ ಅನೇಕ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮುಷ್ಕರ ನಡೆಸುತ್ತಿದ್ದರೂ ಸರ್ಕಾರ ಯಾವುದೇ ರೀತಿ ಬೇಡಿಕೆಗಳಿಗೆ ಸ್ಪಂದಿಸದೇ ಇರುವುದರಿಂದ ಸಮಸ್ಯೆ ಮತ್ತಷ್ಟು ಜಟಿಲವಾಗುತ್ತಿದೆ. ಭೂಮಾಪನ ಕಚೇರಿಯ ಕಡತಗಳು ಮೂಲೆಗೆ ಬಿದ್ದಿವೆ. ಇ ಸ್ವತ್ತು, ಬಿ-ಖಾತಾ, ಭೂಮಾಪನ ಸೇರಿದಂತೆ ಅಗತ್ಯ ಕೆಲಸಕಾರ್ಯಗಳು ನಡೆಯುತ್ತಿಲ್ಲ. ರೈತರು ಸೇರಿದಂತೆ ಎಲ್ಲರಿಗೂ ತೊಂದರೆಯಾಗುತ್ತಿದೆ. ದೂರ ದೂರದ ಹಳ್ಳಿಗಳಿಂದ ಭೂಮಾಪನ ಕಚೇರಿಗೆ ಬರುವ ರೈತರು, ಜನಸಾಮಾನ್ಯರು ಸುಮ್ಮನೇ ಬಂದು ಹೋಗಬೇಕಿದೆ. ಬೇಡಿಕೆ ಈಡೇರುವವರೆಗೆ ಮುಷ್ಕರ ಕೈಬಿಡದೇ ಪಟ್ಟು ಹಿಡಿದಿರುವ ಭೂಮಾಪಕರ ಧೋರಣೆ,ಸರ್ಕಾರದ ನಿರ್ಲಕ್ಷತನದಿಂದ ರೈತರ ಬದುಕುಆತಂತ್ರವಾಗಿದೆ. ಸರ್ಕಾರ ಕೂಡಲೇ ಈ ಸಮಸ್ಯೆಯನ್ನು ಗಂಬೀರವಾಗಿ ಪರಿಗಣಿಸಬೇಕು. ರೈತರು,ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು ಎಂದು ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಶೃಂಗೇರಿ: ಗುಡುಗು ಸಿಡಿಲು ಸಹಿತ ಮಳೆ

ಶೃಂಗೇರಿ: ತಾಲೂಕಿನಾದ್ಯಂತ ಶುಕ್ರವಾರ ಸಂಜೆ ಗುಡುಗು ಸಿಡಿನ ಆರ್ಭಟದೊಂದಿಗೆ ಭಾರಿ ಮಳೆ ಅಬ್ಬರಿಸಿತು. ಶೃಂಗೇರಿ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದೆಲ್ಲೆಡೆ ಗುಡುಗು ಸಿಡಿಲು ಸಹಿತ ಧಾರಾಕಾರ ಮಳೆ ಸುರಿಯಲಾರಂಬಿಸಿತು. ಸಂಜೆ ವೇಳೆ ಭಾರೀ ಗಾಳಿ, ಗುಡುಗು ಸಿಡಿಲು ಜೋರಾಗಿತ್ತು. ಶೃಂಗೇರಿ ಪಟ್ಟಣ, ಮೆಣಸೆ, ಕಿಗ್ಗಾ,ನೆಮ್ಮಾರು,ಕೆರೆಕಟ್ಟೆ,ಬೇಗಾರು ಸೇರಿದಂತೆ ತಾಲೂಕಿನಾದ್ಯಂತ ಸುರಿಯಿತು. ಬೆಳಿಗ್ಗೆ ಮೋಡ ಕವಿದು ಮಳೆ ಬರುವ ಮುನ್ಸೂಚನೆ ಕಂಡು ಬಂದರೂ ಬಿಸಿಲ ವಾತಾವರಣವಿತ್ತು. ಸಂಜೆಯಿಂದ ದಿಡೀರನೇ ಗಾಳಿ, ಗುಡುಗು ಸಿಡಿಲಿನ ಆರ್ಭಟದೊಂದಿಗೆ ಸುರಿಯಲಾರಂಭಿಸಿದ ಮಳೆ ರಾತ್ರಿವರೆಗೂ ಮುಂದುವರಿದಿತ್ತು.



ಅಕ್ರಮ ಮದ್ಯ ಸೇವನೆ: ಇಬ್ಬರ ಬಂಧನ

ನರಸಿಂಹರಾಜಪುರ: ಪಟ್ಟಣದಿಂದ ಹೊನ್ನೇಕೊಡಿಗೆಗೆ ಹೋಗುವ ಸಂಪರ್ಕ ಸೇತುವೆ ಬಳಿ ಇಬ್ಬರು ಯುವಕರು ಅಕ್ರಮವಾಗಿ ಮದ್ಯ ಸೇವಿಸುತ್ತಾ ಕುಳಿತಿದ್ದು ಖಚಿತ ಮಾಹಿತಿ ಮೇರೆಗೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಬುಧವಾರ ಪೊಲೀಸರಿಗೆ ಬಂದ ಮಾಹಿತಿ ಮೇರೆಗೆ ಸೇತುವೆ ಸಮೀಪ ಬಂದು ಅಕ್ರಮ ಮದ್ಯಪಾನ ಮಾಡುತ್ತ ಕುಳಿತಿದ್ದ ಕೂಲಿ ಕೆಲಸಗಾರರಾದ ಧನಂಜಯ, ಶ್ರೀಕಾಂತ್ ಎಂಬುವರನ್ನು ಬಂಧಿಸಿ ಸ್ಥಳದಲ್ಲಿದ್ದ ಮದ್ಯದ ಬಾಟಲಿ, ಗ್ಲಾಸ್ ವಶಪಡಿಸಿ ಕೊಂಡಿದ್ದಾರೆ. ಎನ್.ಆರ್.ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಪ್ರೀಂ ಕೋರ್ಟ್ ಮೊರೆ ಹೋದ ರಾಜೇಗೌಡ

ಅಂಚೆ ಮತ ಮರು ಎಣಿಕೆ ಅನ್ಯಾಯದ ವಿರುದ್ಧ ಆಪೀಲು | ವಕೀಲ ಸುಧೀರ್ ಕುಮಾರ್ ಮುರೊಳ್ಳಿ ಮಾಹಿತಿ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತ ಮರು ಎಣಿಕೆಯಲ್ಲಿನ ಅನ್ಯಾಯದ ವಿರುದ್ಧ ಇದೀಗ ಟಿ.ಡಿ.ರಾಜೇಗೌಡ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ರಾಜೇಗೌಡ ಪರ ವಕೀಲರು ಸಲ್ಲಿರುವ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ವಿಚಾರಣೆ ಬರುವ ಸಾಧ್ಯತೆ ಇದೆ. ಗುರುವಾರವೇ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆ ಮಾಡಲಾಗಿದೆ ಎಂದು 'ಕನ್ನಡಪ್ರಭ'ಕ್ಕೆ ವಕೀಲ ಸುಧೀರ್ ಕುಮಾರ್ ಮುರೊಳ್ಳಿ ಮಾಹಿತಿ ನೀಡಿದ್ದಾರೆ.

ಯಾವ ಯಾವ ಅಂಶಗಳ ಮೇಲೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆ ಮಾಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ಲಭ್ಯವಿಲ್ಲ. ಆದರೆ, ಈ ಪ್ರಕರಣದಲ್ಲಿ ರಾಜೇಗೌಡ ಅವರಿಗೆ ಅನ್ಯಾಯವಾಗಿರುವುದು ಮಾತ್ರ ನಿಜ. ಅನ್ಯಾಯದ ವಿರುದ್ಧ ಹೋರಾಟ ಆರಂಭಿಸಲಾಗಿದೆ. ಕಾನೂನಿನ ಮೇಲೆ ವಿಶ್ವಾಸವಿದ್ದು, ರಾಜೇಗೌಡರಿಗೆ ನ್ಯಾಯ ದೊರೆಯಲಿದೆ ಎಂದು ಸುಧೀರ್ ಕುಮಾರ್ ಮುರೊಳ್ಳಿ ವಿಶ್ವಾಸ ವ್ಯಕ್ತಪಡಿಸಿದರು.

2023ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ 201 ಮತದಿಂದ ಗೆಲುವು ಸಾಧಿಸಿದ್ದರು. ಪರಾಜಿತಗೊಂಡ ಬಿಜೆಪಿ ಅಭ್ಯರ್ಥಿ ಜೀವರಾಜ್ ಅಂಚೆ ಮತ ಎಣಿಕೆಯಲ್ಲಿ ಲೋಪ ಉಂಟಾಗಿದ್ದು, ತಿರಸ್ಕೃತಗೊಂಡ 279 ಅಂಚೆ ಮತ ಪುನರ್ ಪರಿಶೀಲನೆ ನಡೆಸಬೇಕೆಂದು ಹೈ ಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ತಿರಸ್ಕೃತ ಅಂಚೆ ಮತ ಪುನರ್ ಪರಿಶೀಲಿಸಬೇಕು. ಈ ಪೈಕಿ ಸಿಂಧು ಮತಗಳು ಕಂಡು ಬಂದರೆ, ಅಂಚೆ ಮತಗಳನ್ನು ಮರು ಎಣಿಕೆ ಮಾಡಬೇಕು ಎಂದು ಸೂಚಿಸಿತ್ತು. ಅದರಂತೆ ಮೇ 2 ರಂದು ಚುನಾವಣಾ ಆಯೋಗ ಅಂಚೆ ಮತ ಪರಿಶೀಲನೆ ಮತ್ತು ಮರು ಎಣಿಕೆ ನಡೆಸಿತ್ತು.





ಈ ವೇಳೆ 2023ರಲ್ಲಿ ಕಾಂಗ್ರೆಸ್‌ನ ರಾಜೇಗೌಡರು ಪಡೆದ ಅಂಚೆ ಮತದ ಪೈಕಿ ಬರೋಬ್ಬರಿ 255 ಮತ ಹಾಗೂ ಬಿಜೆಪಿಯ ಜೀವರಾಜ್ ಪಡೆದ ಮತಗಳ ಪೈಕಿ 2 ಮತ ಅಸಿಂಧು ಆಗಿದ್ದವು.

ಹೀಗಾಗಿ, 2023ರಲ್ಲಿ ಜಯಶಾಲಿಯಾಗಿದ್ದ ಟಿ.ಡಿ. ರಾಜೇಗೌಡ 52 ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಬಿಜೆಪಿ ಅಭ್ಯರ್ಥಿ ಜೀವರಾಜ್ 52 ಮತದಿಂದ ಗೆಲುವು ಸಾಧಿಸಿದ್ದರು.

2023ರಲ್ಲಿ ಸಿಂಧು ಆಗಿದ್ದ ಮತಗಳು ಇದೀಗ ಅಸಿಂಧು ಆಗಿದ್ದು, ಹೇಗೆ?, ಮತಗಳನ್ನು ಟ್ಯಾಂಪರಿಂಗ್ ಮಾಡಲಾಗಿದೆ ಎಂದು ಬಿಜೆಪಿ ಅಭ್ಯರ್ಥಿ ಜೀವರಾಜ್, ಅಂದಿನ ಚುನಾವಣಾಧಿಕಾರಿ ವೇದಮೂರ್ತಿ ಹಾಗೂ ಅಂದಿನ ಜಿಲ್ಲಾ ಚುನಾವಣಾಧಿಕಾರಿ ರಮೇಶ್ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಪೊಲೀಸರು ಸಹ ಎಫ್‌ಐಆರ್ ದಾಖಲಿಸಿ ತನಿಖೆಗೆ ಮುಂದಾಗಿದ್ದರು.

ಈ ನಡುವೆ ಜೀವರಾಜ್ ಹೈಕೋರ್ಟ್‌ಗೆ ಎಫ್‌ಐಆರ್ ರದ್ದಿಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯ ಎಫ್‌ಐಆರ್ ರದ್ದಿಗೆ ತಡೆಯಾಜ್ಞೆ ನೀಡಿದೆ. ಈ ಹಿನ್ನೆಲೆಯಲ್ಲಿ ಇದೀಗ ಟಿ,ಡಿ.ರಾಜೇಗೌಡ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಸಿಎಂ ಮತ ಡಕಾಯತಿ ಸಾಬೀತು ಪಡಿಸಲಿ

ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಮತ ಡಕಾಯಿತಿ ನಡೆದಿದೆ ಎಂದು ಸಿಎಂ ಸಿದ್ದರಾಮಯ್ಯ ಆರೋಪ ಮಾಡಿದ್ದಾರೆ. ಆದರೆ ಆ ಆರೋಪಗಳಿಗೆ ಪುರಾವೆಗಳಿದ್ದರೆ ಸಾಬೀತುಪಡಿಸಲಿ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಸವಾಲು ಹಾಕಿದ್ದಾರೆ.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರೇ ಮತ ಡಕಾಯಿತಿ ಮಾಡಿದರು ಅವರ ಮೇಲೆ ಕಠಿಣ ಶಿಕ್ಷೆ ಆಗಲಿ. ಅದನ್ನು ಬಿಟ್ಟು ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯರಿದ್ದಾರೆ. ಅವರ ಬಳಿ ಯಾವುದೇ ದಾಖಲೆಗಳಿದ್ದರೆ ಅದನ್ನು ಸಾಬೀತುಪಡಿಸಲಿ. ಅದನ್ನು ಬಿಟ್ಟು ಸುಮ್ಮನೆ ಮಾತನಾಡಿದರೆ ಸರಿಯಲ್ಲ ಎಂದರು.

ಒಂದು ವೇಳೆ ಮತ ಡಕಾಯತಿ ನಡೆದಿದ್ದರೆ ನಾನು ಸಹಿಸುವುದಿಲ್ಲ. ಅವರು ಯಾವುದೇ ಪಕ್ಷದವರಾಗಿರಲಿ. ಮತ ಡಕಾಯತಿ ನಡೆದಿದೆ ಎಂದಾದರೆ ಚುನಾವಣಾ ಆಯೋಗದ ಮುಂದೆ ಇಲ್ಲವೆ ನ್ಯಾಯಾಲಯದ ಎದುರು ಸಾಬೀತುಪಡಿಸಿ. ಇಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆಯಾಗಲೇಬೇಕು ಎಂದು ಆಗ್ರಹಿಸಿದರು.

2023ರ ಚುನಾವಣೆ ಫಲಿತಾಂಶ ಹಾಗೂ 2026ರಲ್ಲಿ ನಡೆದ ಮರುಮತ ಎಣಿಕೆ ಫಲಿತಾಂಶಗಳು ವೈರುಧ್ಯವಾಗಿವೆ. ಇದರಲ್ಲಿ ಒಂದು ಸತ್ಯವಾಗಿರಲು ಸಾಧ್ಯ. ಈ ಸತ್ಯಾಸತ್ಯತೆ ಬಗ್ಗೆ ಹೇಳುವ ಅಧಿಕಾರ ನನಗಿಲ್ಲ. ಸಿಎಂ ಬಳಿ ದಾಖಲೆಗಳಿದ್ದರೆ ನ್ಯಾಯಾಲಯದ ಎದುರು ಇಡಲಿ. ಅದನ್ನು ಬಿಟ್ಟು ಸಾರ್ವಜನಿಕವಾಗಿ ಮಾತನಾಡುವುದು ಸರಿಯಲ್ಲ. ನ್ಯಾಯಾಲಯಕ್ಕೆ ದಾಖಲೆ ಕೊಡಿ ಎಂದು ಆಗ್ರಹಿಸಿದರು.

ಚಿಕ್ಕಮಗಳೂರು ನಗರ ಸಭೆಗೆ ಲಲಿತಾ ರವಿ ನಾಯ್ಕ್ ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ನಗರಸಭೆ ಅಧ್ಯಕ್ಷರಾಗಿದ್ದ ಜೆಡಿಎಸ್‌ನ ಶೀಲಾ ದಿನೇಶ್ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಉಪಾಧ್ಯಕ್ಷರಾಗಿದ್ದ ಲಲಿತಾ ರವಿ ನಾಯ್ಕ್ ಶುಕ್ರವಾರ ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಜೆಡಿಎಸ್ ಹಾಗೂ ಬಿಜೆಪಿ ಪರಸ್ಪರ ತಲಾ 10 ತಿಂಗಳು ಅಧಿಕಾರ ನಡೆಸುವ ಒಪ್ಪಂದ ಮಾಡಿಕೊಂಡಿದ್ದಂತೆ ಇದೀಗ ಜೆಡಿಎಸ್‌ನ ಶೀಲಾ ದಿನೇಶ್ ಅವರ 10 ತಿಂಗಳ ಅಧಿಕಾರ ಗುರುವಾರಕ್ಕೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಬಿಜೆಪಿಯಿಂದ ಯಾರು ಅಧ್ಯಕ್ಷರಾಗಬೇಕು ಎಂಬ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ. ಹೀಗಾಗಿ, ಶುಕ್ರವಾರ ಹಂಗಾಮಿ ಅಧ್ಯಕ್ಷರಾಗಿ ಹಾಲಿ ಉಪಾಧ್ಯಕ್ಷೆ ಲಿಲಿತಾ ರವಿ ನಾಯ್ಕ್ ಅವರನ್ನು ನೇಮಿಸಿದ್ದು, ಶುಕ್ರವಾರ ಅಧಿಕಾರ ಸ್ವೀಕಾರ ಮಾಡಿದ್ದಾರೆ.

ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿದ ಲಲಿತಾ ರವಿ ನಾಯ್ಕ್ ಅವರಿಗೆ ನಗರಸಭೆ ಮಾಜಿ ಅಧ್ಯಕ್ಷೆ ಶೀಲಾ ದಿನೇಶ್, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಆರ್. ದೇವರಾಜ ಶೆಟ್ಟಿ, ಬಿಜೆಪಿ ನಗರಾಧ್ಯಕ್ಷ ಕೆ.ಎಸ್. ಪುಷ್ಪರಾಜ್ ಮತ್ತಿತರರು ಶುಭ ಕೋರಿದರು.

ಈ ವೇಳೆ ಮಾತನಾಡಿದ ನಗರಸಭೆ ಪ್ರಭಾರ ಅಧ್ಯಕ್ಷೆ ಲಲಿತಾ ರವಿ ನಾಯ್ಕ್, ಬಿಜೆಪಿ ನಾಯಕರು ಸಣ್ಣ ಸಮುದಾಯವನ್ನು ಗುರುತಿಸಿ ಪ್ರಭಾರ ಅಧ್ಯಕ್ಷ ಸ್ಥಾನ ನೀಡಿದ್ದಾರೆ. ಅವರ ನಂಬಿಕೆಗೆ ಲೋಪವಾಗದಂತೆ ಸಿಕ್ಕಿರುವ ಸಣ್ಣ ಅವಧಿಯಲ್ಲಿ ಉತ್ತಮ ಕೆಲಸ ಮಾಡಿ ತೋರಿಸುತ್ತೇನೆ. ನನ್ನ ಈ ಬೆಳವಣಿಗೆಗೆ ಪಕ್ಷದ ಸಣ್ಣ ಸಣ್ಣ ಕಾರ್ಯಕರ್ತರು ಕಾರಣಕರ್ತರಾಗಿದ್ದಾರೆ ಎಂದು ಹೇಳಿದರು. ನಗರ ಸಭೆ ನಿಕಟಪೂರ್ವ ಅಧ್ಯಕ್ಷೆ ಶೀಲಾ ದಿನೇಶ್ ಮಾತನಾಡಿ, ಈ ಹಿಂದಿನ ಒಪ್ಪಂದದಂತೆ 10 ತಿಂಗಳ ಕಾಲ ಜನರು ಮೆಚ್ಚುವಂತೆ ಕೆಲಸ ಮಾಡಿದ್ದೇನೆ. ನಮ್ಮ ನಾಯಕರಾದ ಎಸ್.ಎಲ್. ಭೋಜೇಗೌಡ ಸೇರಿದಂತೆ ಶಾಸಕ ಎಚ್.ಡಿ.ತಮ್ಮಯ್ಯ ಹಾಗೂ ವಿಧಾನ ಪರಿಷತ್‌ ಸದಸ್ಯ ಸಿ.ಟಿ. ರವಿ ಅವರ ಮಾರ್ಗದರ್ಶನದಂತೆ ಉತ್ತಮ ಕೆಲಸ ಮಾಡಿದ್ದೇನೆ ಎಂಬ ಖುಷಿ ನನಗಿದೆ ಎಂದರು.

ಚಿಕ್ಕಮಗಳೂರಿನ ಶಾಸಕ ಎಚ್.ಡಿ.ತಮ್ಮಯ್ಯ ಅವರು ಸೈಕಲ್ ತುಳಿ ಸಮಸ್ಯೆ ತಿಳಿ ಎಂಬ ಕಾರ್ಯಕ್ರಮ ಹಮ್ಮಿಕೊಂಡಾಗ ನಗರ ವ್ಯಾಪ್ತಿಯ ರಸ್ತೆಗಳ ದುಸ್ಥಿತಿ ಬಗ್ಗೆ ಶಾಸಕರ ಗಮನಕ್ಕೆ ತಂದಿದ್ದೆ. ಶಾಸಕರು ಸಮಸ್ಯೆ ಪರಿಹರಿಸುವ ಜೊತೆಗೆ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಅಗತ್ಯ ಕ್ರಮ ಕೈಗೊಂಡಿದ್ದಾರೆ ಎಂದು ಹೇಳಿದರು.

ಜೆಡಿಎಸ್ ಪಕ್ಷದಿಂದ ನಗರಸಭೆ ಸದಸ್ಯರಾಗಿ ಆಯ್ಕೆಯಾದರೂ ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಹೀಗಾಗಿ ಎಲ್ಲರ ಸಲಹೆ ಮೇರೆಗೆ ಉತ್ತಮ ಕೆಲಸ ಮಾಡಿದ್ದೇನೆ ಎನ್ನುವ ನಂಬಿಕೆ ಇದೆ. ನಗರದ ಸ್ವಚ್ಛತೆ ಬಗ್ಗೆ ಎಸ್.ಎಲ್.ಭೋಜೇಗೌಡ ಅವರು ಕಾಳಜಿ ವಹಿಸಿದ್ದರು. ಆದರಂತೆ ಚಿಕ್ಕಮಗಳೂರು ನಗರವನ್ನು ಪ್ಲಾಸ್ಟಿಕ್ ಮುಕ್ತ ನಗರವನ್ನಾಗಿ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿದ್ದೇನೆ. ಇದಲ್ಲದೆ ಪ್ರತಿ ವಾರ್ಡ್‌ನಲ್ಲಿಯೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿರುವುದು ತೃಪ್ತಿ ತಂದಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯೆ ಕವಿತಾ ಶೇಖರ್, ಆಯುಕ್ತ ಬಿ.ಸಿ.ಬಸವರಾಜ್ ಇದ್ದರು.



ಪ್ರಭಾರ ಅಧ್ಯಕ್ಷರಾದ ಲಲಿತಾ ರವಿ ನಾಯ್ಕ್ ಅವರಿಗೆ ಸಿ.ಟಿ. ರವಿ, ದೇವರಾಜ ಶೆಟ್ಟಿ ಇತರರು ಅಭಿನಂದಿಸಿದರು.

ಚಿಕ್ಕಮಗಳೂರು ನಗರಸಭೆಯಲ್ಲಿ ಅಧ್ಯಕ್ಷ ಸ್ಥಾನವನ್ನು ಒಂದು ಅವಧಿಗೆ ಜೆಡಿಎಸ್ ಗೆ ನೀಡಬೇಕು ಎಂದು ಒಪ್ಪಂದ ಮಾಡಿ ಕೊಂಡಿದ್ದವು. ಆದರಂತೆ ಶೀಲಾ ದಿನೇಶ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದೆವು. ಆಂತರಿಕ ಒಪ್ಪಂದದಂತೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಹೀಗಾಗಿ ಪ್ರಭಾರ ಅಧ್ಯಕ್ಷರನ್ನಾಗಿ ಲಲಿತ ರವಿ ನಾಯಕ ಅಧಿಕಾರ ಸ್ವೀಕರಿಸಿದ್ದಾರೆ. ಮುಂದಿನ 10 ತಿಂಗಳ ಅವಧಿಗೆ ಯಾರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಎಂಬ ಬಗ್ಗೆ ಪಕ್ಷದ ಮುಖಂಡರೊಂದಿಗೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ.

• **ಎಂ.ಆರ್.ದೇವರಾಜ ಶೆಟ್ಟಿ**

ಚಿಕ್ಕಮಗಳೂರು ನಗರಸಭೆಯಲ್ಲಿ ಕೆಲಗೊಂದಲಗಳ ಹೊರತಾಗಿ ಪಕ್ಷಾತೀತವಾಗಿ ಎಲ್ಲರೂ ಕಾರ್ಯ ನಿರ್ವಹಣೆ ಮಾಡುತ್ತಿ ದ್ದಾರೆ. ನಗರದ ಅಭಿವೃದ್ಧಿ ದೃಷ್ಟಿಯಿಂದ ಎಲ್ಲರೂ ಸಹಕಾರ ನೀಡುತ್ತಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲಿ ನಗರಸಭೆ ಯಲ್ಲಿ ಅತ್ಯದ್ಭುತವಾಗಿ ಕೆಲಸ ಮಾಡಿರುವ ಸದಸ್ಯರಿಗೆ ಅಧ್ಯಕ್ಷರ ಅಧಿಕಾರ ಸಿಗಲಿದೆ. ಮುಂದೆ ಅಧಿಕಾರ ಸ್ವೀಕರಿಸಲಿರುವ ಅಧ್ಯಕ್ಷರು ಉತ್ತಮ ಕೆಲಸ ಮಾಡಿ ಜನರಿಗೆ ಅನುಕೂಲ ಒದಗಿಸುವ ಜೊತೆಗೆ ನಮ್ಮ ಪಕ್ಷಕ್ಕೂ ಕೀರ್ತಿ ತರಲಿ.

• **ಸಿ.ಟಿ.ರವಿ** ವಿಧಾನಪರಿಷತ್ ಸದಸ್ಯ

ಮನೆ ನೆಲಸಮ: 20 ಜನರ ಮೇಲೆ ಪ್ರಕರಣ ದಾಖಲು



• **ಕನ್ನಡಪ್ರಭ ವಾರ್ತೆ** ತರೀಕೆರೆ

ತಾಲೂಕಿನ ಅಮೃತಾಪುರ ಹೋಬಳಿ ಯರೇಹಳ್ಳಿ ತಾಂಡ್ಯ ಗ್ರಾಮದಲ್ಲಿ ಮನೆ ನೆಲಸಮಗೊಳಿಸಲಾಗಿದೆ ಎಂಬ ರಾಮಾಭೋವಿ ಎಂಬಾತ ನೀಡಿರುವ ದೂರಿನ ಮೇರೆಗೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಸುಮಾರು 20 ಜನರ ಮೇಲೆ ಪ್ರಕರಣ ದಾಖಲಾಗಿದೆ.

ಸದರಿ ಜಾಗದಲ್ಲಿ ಹಲವು ವರ್ಷಗಳಿಂದ ಕುಟುಂಬದೊಂದಿಗೆ ವಾಸವಾಗಿದ್ದೇವೆ. ಈ ಜಾಗ ನಮಗೆ ಸೇರಬೇಕು. ಈ ಜಾಗದ ವಿಷಯವಾಗಿ ನಾವು ನ್ಯಾಯಾಲಯದಲ್ಲಿ ಕೇಸು ನಡೆಸುತ್ತಿದ್ದೇವೆ. ಗ್ರಾಮಸ್ಥರು ನಮ್ಮ ಮನೆಯನ್ನು ನೆಲಸಮಗೊಳಿಸಿದ್ದಾರೆ ಎಂದು ದೂರುದಾರ ರಾಮಾಭೋವಿ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ರಾಮಾಬೋವಿ ವಾಸವಿರುವ ಜಾಗ ದೇವಸ್ಥಾನಕ್ಕೆ ಸೇರಿದ್ದು ದಾಖಲೆಗಳು ದೇವಸ್ಥಾನದ ಹೆಸರಿನಲ್ಲಿವೆ. ಗ್ರಾಮಸ್ಥರ ಅನು ಮತಿ ಪಡೆದು ಸದರಿ ಜಾಗದಲ್ಲಿ ತಾತ್ಕಾಲಿಕವಾಗಿ ಮನೆ ನಿರ್ಮಿಸಿಕೊಂಡು ಸ್ವಲ್ಪ ದಿನಗಳ ಕಾಲ ವಾಸವಿರುವುದಾಗಿ ತಿಳಿಸಿದ್ದ ರಾಮಾಬೋವಿ ನಂತರದ ದಿನಗಳಲ್ಲಿ ಜಾಗ ಬಿಟ್ಟು ಕೊಡಲು ಒಪ್ಪಿರಲಿಲ್ಲ. ಈ ಜಾಗ ನಮ್ಮ ಹೆಸರಿಗೆ ದಾಖಲೆ ಮಾಡಿಕೊಡ ಬೇಕೆಂದು ಗ್ರಾಮ ಪಂಚಾಯಿತಿಗೆ ಅರ್ಜಿ ಕೂಡ ಕೊಟ್ಟಿದ್ದರು. ಇದರ ಮಾಹಿತಿ ತಿಳಿದ ಗ್ರಾಮಸ್ಥರು ಇದನ್ನು ವಿರೋಧಿಸಿ ಸದರಿ ಜಾಗನ್ನು ತೆರವುಗೊಳಿಸಿದ್ದಾರೆ ಎಂದು ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ.

ದೋಣಿ ಖಣದ ಶ್ರೀ ಕೊಲ್ಲಾಪುರದಮ್ಮ ಜಾತ್ರೋತ್ಸವ, ಸಿಡಿ ಮಹೋತ್ಸವ

ಚಿಕ್ಕಮಗಳೂರು: ಪಟ್ಟಣದ ದೋಣಿ ಖಣದ ಶ್ರೀ ಕೊಲ್ಲಾಪುರದಮ್ಮನವರ 294 ನೇ ವರ್ಷದ ಜಾತ್ರೆ ಮತ್ತು ಸಿಡಿ ಮಹೋತ್ಸವ ಮೇ 12 ರ ಮಂಗಳವಾರದವರೆಗೆ ನಡೆಯಲಿದೆ.

ಮೇ 1ರಿಂದ ಧ್ವಜ ಸ್ಥಂಭನಾ ಕಾರ್ಯ ಕ್ರಮದಿಂದ ಆರಂಭವಾಗಿರುವ ಉತ್ಸವ ಶ್ರೀ ಅಮ್ಮನ ಮೆರವಣಿಗೆ, ಗಣ ಹೋಮ, ಪೂರ್ಣಾಹುತಿ, ದುರ್ಗಾಶಕ್ತಿ ಹೋಮ, ಪೂರ್ಣಾಹುತಿ ಸಂಪನ್ನಗೊಂಡಿದೆ.

ಮೇ 7 ರ ಸಂಜೆ ಶ್ರೀ ಅಮ್ಮನ ದೇವಿಯನ್ನು ಶ್ರೀ ಬೋಳ ರಾಮೇಶ್ವರ ದೇವಾಲಯದಿಂದ ಪೂಜೆ ನೆರವೇರಿಸಿ, ಅಲಂಕೃತ ವಾಹನದಲ್ಲಿ ಶ್ರೀ ದೇವಿಗೆ ರಾಜ ಬೀದಿಗಳಲ್ಲಿ ಮೆರವಣಿಗೆ ನಡೆಸಿ ದೇವಾಲಯಕ್ಕೆ ಕರೆ ತರಲಾಯಿತು. ರಾತ್ರಿ ಸಿಡಿಮದ್ದುಗಳ ಪ್ರದರ್ಶನ ನಡೆಯಿತು.

ಮೇ 8 ರ ಶುಕ್ರವಾರ ಸಂಜೆ 5.30ಕ್ಕೆ ಮೀಸಲು ಹೊತ್ತ ಮಹಿಳೆಯರನ್ನು ದೇವಸ್ಥಾನದಿಂದ ಆವರಣಕ್ಕೆ ಕರೆ ತರಲಾಗುವುದು.

ಆನಂತರ ಶ್ರೀದೇವಿ ಗಣಗಳ ಸಿಡಿ ಮಹೋತ್ಸವ ನಡೆಯಲಿದೆ. 9 ರ ಶನಿವಾರ ಮಧ್ಯಾನ 3 ಗಂಟೆಯಿಂದ ಶ್ರೀ ಚಾಮದೇವರ ಸೇವೆ ಮತ್ತು ಶ್ರೀ ಬೂತಪ್ಪಸ್ವಾಮಿ ಬೇಟೆ ಮಣಿ ನಡೆಯಲಿದೆ. ಮೇ 9 ರ ಭಾನುವಾರ ಬೆಳಿಗ್ಗೆ 11ಕ್ಕೆ ಮದ್ದು ಗುಂಡು ಪ್ರದರ್ಶನ, ಸಿಡಿ ಮತ್ತು ಓಕಳಿ ಮತ್ತು ಶ್ರೀ ಮಧ್ಯಾಹ್ನ ಸಾರ್ವಜನಿಕ ಅನ್ನ ಸಂತರ್ಪಣೆ, ಸಂಜೆ 4 ಗಂಟೆಗೆ ಶ್ರೀದುರ್ಗಮ್ಮನವರ ಕಳಸ ವಿಸರ್ಜನೆ ಕಾರ್ಯ ಮತ್ತು ಗ್ರಾಮದ ರಸ್ತೆಗಳಲ್ಲಿ ನಡೆ ಮುಡಿ ಮೂಲಕ ರಾತ್ರಿ 8.30 ಕ್ಕೆ ಕಳಸ ವಿಸರ್ಜನೆ ನಡೆಯಲಿದೆ ಎಂದು ದೇವಾಲಯದ ಸಮಿತಿ ಪ್ರಕಟಣೆ ತಿಳಿಸಿದೆ.

31ರಂದು ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ: ಎಸ್.ಎಂ. ನಾಗರಾಜ್

ತರೀಕೆರೆ: ಪ್ರತಿವರ್ಷದಂತೆ ಈ ವರ್ಷ ಮೆ.31 ರಂದು ಅಜ್ಜಂಪುರದಲ್ಲಿ ನೊಳಂಬ ಸಂಘದಿಂದ ಜಿಲ್ಲಾ ಮಟ್ಟದ ನೊಳಂಬ ಸಮಾಜ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಅಜ್ಜಂಪುರ ಶ್ರೀ ಗುರು ಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಮಾಜಿ ಶಾಸಕ ಎಸ್.ಎಂ.ನಾಗರಾಜ್ ಹೇಳಿದ್ದಾರೆ.

ಗುರುವಾರ ಪಟ್ಟಣದ ಶ್ರೀ ಗುರು ಸಿದ್ದರಾಮೇಶ್ವರ ಪತ್ತಿನ ಸಹಕಾರ ಸಂಘದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಇದು 12ನೇ ವರ್ಷದ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ. ಎಸ್.ಎಸ್.ಎಲ್.ಸಿ.ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ನೊಳಂಬ ಸಮಾಜದ ವಿದ್ಯಾರ್ಥಿಗಳು ಮೇ.23 ರ ಒಳಗೆ ಸೂಕ್ತ ದಾಖಲೆಯೊಂದಿಗೆ ವ್ಯವಸ್ಥಾಪಕರು, ಶ್ರೀ ಗುರು ಸಿದ್ದರಾಮೇಶ್ವರ ಸಮುದಾಯ ಭವನ ಅಜ್ಜಂಪುರ ಈ ವಿಳಾಸಕ್ಕೆ ಅರ್ಜಿ ಸಲ್ಲಿಸ ಬಹುದಾಗಿದೆ ಎಂದು ಹೇಳಿದರು.

ಇದೇ ಕಾರ್ಯಕ್ರಮದಲ್ಲಿ ಸಮಾಜದ ಬಡವರು, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ವಿತರಿಸಲಾಗುವುದು ಎಂದು ಹೇಳಿದರು.

ಮುಖಂಡರಾದ ಮಹೇಶ್ವರಪ್ಪ, ಮಲ್ಲೇಶಪ್ಪ, ಮೋಹನ್, ಶಾರದ ವೇಲುಮುರುಗನ್, ಅಜಯ್, ಶಿವಕುಮಾರ್, ವಿನಯ್ ಮತ್ತಿತರರು ಭಾಗವಹಿಸಿದ್ದರು.



ತರೀಕೆರೆಯ ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ನೊಳಂಬ ಸಂಘದ ಮಾಜಿ ರಾಜ್ಯಾಧ್ಯಕ್ಷ, ಮಾಜಿ ಶಾಸಕ ಎಸ್.ಎಂ.ನಾಗರಾಜ್ ಮಾತನಾಡಿದರು. ಮುಖಂಡರಾದ ಮಹೇಶ್ವರಪ್ಪ, ಮಲ್ಲೇಶಪ್ಪ, ಶಾರದ ವೇಲುಮುರುಗನ್ ಮತ್ತಿತರರು ಭಾಗವಹಿಸಿದ್ದರು.

ಮತ ಎಣಿಕೆಯಲ್ಲಿ ಲೋಪವಾಗಿಲ್ಲ ಎಂದು ಬಿಜೆಪಿಯಿಂದ ಪ್ರಮಾಣ

ಆಣೆ–ಪ್ರಮಾಣ ರಾಜಕೀಯ; ತೀವ್ರಗೊಂಡ ಚರ್ಚೆಗಳು

• **ಕನ್ನಡಪ್ರಭ ವಾರ್ತೆ** ಕೊಪ್ಪ

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ ಬಿಜೆಪಿಯ ಡಿ.ಎನ್. ಜೀವರಾಜ್ ಗೆಲುವು ಸಾಧಿಸಿ ಅಧಿಕಾರ ಹಿಡಿದಿರುವ ಬೆನ್ನಲ್ಲೇ ಕ್ಷೇತ್ರದಲ್ಲಿ ಆಣೆ-ಪ್ರಮಾಣ ಆಧಾರಿತ ರಾಜಕೀಯ ಚರ್ಚೆಗಳು ತೀವ್ರಗೊಂಡಿವೆ. 2023ರ ಚುನಾವಣೆ ಮತ ಎಣಿಕೆಯಲ್ಲಿ ಲೋಪ ನಡೆದಿದೆ ಎಂಬ ಆರೋಪ-ಪ್ರತ್ಯಾರೋಪಗಳ ನಡುವೆ ಇದೀಗ ದೇವರ ಸನ್ನಿಧಿಯಲ್ಲಿ ಸತ್ಯಾಸತ್ಯತೆ ಸಾಬೀತುಪಡಿಸಲು ಪಕ್ಷಗಳ ಮುಖಂಡರು ನಾ ಮುಂದು ತಾ ಮುಂದು ಎನ್ನುತ್ತಿದ್ದಾರೆ.

ಮೇ 9 ಕ್ಕೆ ಕೊಪ್ಪದ ಆದಿದೇವತೆ ಶ್ರೀವೀರಭದ್ರಸ್ವಾಮಿ ದೇಗುಲದಲ್ಲಿ ಯಾರೇ ತಪ್ಪು ಮಾಡಿದ್ದರೂ ಅವರಿಗೆ ಶಿಕ್ಷೆಯಾಗಲಿ ಎಂದು ಕಾಂಗ್ರೆಸ್ ಕಾರ್ಯಕರ್ತರು ವಿಶೇಷ ಪ್ರಾರ್ಥನೆ ನಡೆಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಇದಕ್ಕೂ ಮುನ್ನ ಬಿಜೆಪಿ ಬೂತ್ ಏಜೆಂಟ್‌ಗಳೇ ಒಂದು ದಿನ ಮುಂಚಿತವಾಗಿ ಮೇ 8 ರ ಶುಕ್ರವಾರವೆ ದೇವರ ಮುಂದೆ ಹಾಜರಾಗಿ ಮತ ಎಣಿಕೆಯಲ್ಲಿ ಯಾವುದೇ ಲೋಪವಾಗಿಲ್ಲ ಎಂದು ಪ್ರಮಾಣ ಮಾಡಿದ್ದಾರೆ. ಕೊಪ್ಪದ ವೀರಭದ್ರಸ್ವಾಮಿ ದೇಗುಲ ಹಾಗೂ ಗಬ್ಬಾನೆ ಬೂತರಾಯ ದೇವಸ್ಥಾನದಲ್ಲಿ ಪ್ರಮಾಣದ ವೇಳೆ 2023ರ ಮತ ಎಣಿಕೆಯಲ್ಲಿ ಪಾಲ್ಗೊಂಡಿದ್ದ ಏಜೆಂಟ್‌ಗಳು ಭಾಗವಹಿಸಿದ್ದರು.

ಅದ್ದಾಡ ಸತೀಶ್, ಶೆಟ್ಟಿಗದ್ದೆ ರಾಮಸ್ವಾಮಿ, ಕಿರಣ್ ಮಡಬಳ್ಳಿ ಹಾಗೂ ಅನುಪ್ ನಾರ್ವೆ ಸೇರಿದಂತೆ ಹಲವರು ದೇವರ ಸನ್ನಿಧಿಯಲ್ಲಿ ''ಮತ ಎಣಿಕೆಯಲ್ಲಿ ಯಾವುದೇ ಅಕ್ರಮ, ಲೋಪವಾಗಿಲ್ಲ'' ಎಂದಿದ್ದಾರೆ.

ಬಿಜೆಪಿ ಕಾರ್ಯ ಕರ್ತರೊಳಗೇ ಸೋಲಿನ ಬಗೆಗಿನ ವದಂತಿ ಮತ್ತು ಕೆಲವರು ಕಾಂಗ್ರೆಸ್ ಜೊತೆ ಕೈಜೋಡಿಸಿ ಬಿಜೆಪಿ ಸೋಲಿಗೆ ಕಾರಣರಾದರು ಎಂಬ ಆರೋಪ ರಾಜಕೀಯವಾಗಿ ಹೊಸ ತಿರುವು ಪಡೆದುಕೊಂಡಿವೆ. ಈ ಬೆಳವಣಿಗೆ ಶೃಂಗೇರಿಯಲ್ಲಿ ಕೈ-ಕಮಲ ಪಕ್ಷಗಳ ನಡುವಿನ ಸುಳ್ಳು-ಸತ್ಯದ ರಾಜಕೀಯದ ಮೇಲಾಟದಿಂದ ಮರು ಮತ ಎಣಿಕೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದರೂ, ಈ ವಿವಾದ ರಾಜಕೀಯ ಹಾಗೂ ಭಾವನಾತ್ಮಕ ಮಟ್ಟದಲ್ಲಿ ಮುಂದುವರಿಯುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ


ಕಸಾಪ ಸಂಸ್ಥಾಪನಾ ದಿನ | ತರೀಕೆರೆಯಲ್ಲಿ ಕುಂಭಕ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಅಭಿನಂದನಾ ಸಮಾರಂಭ

ಕೊಟ್ಟ ಮಾತಿನಂತೆ ನಡೆಯುವುದೇ ಕನ್ನಡದ ಸಂಸ್ಕೃತಿ: ಅಶೋಕ್

• **ಕನ್ನಡಪ್ರಭ ವಾರ್ತೆ** ತರೀಕೆರೆ

ತಾವು ಕೊಟ್ಟ ಮಾತಿನಂತೆ ನಡೆಯುವುದೇ ಕನ್ನಡ ನುಡಿ ಸಂಸ್ಕೃತಿ ಎಂದು ಚಿಕ್ಕಮಗಳೂರು ಕುಂಭಕ ಸಾಂಸ್ಕೃತಿಕ ಪ್ರತಿಷ್ಠಾನ (ಕುಂದೂರು ಭದ್ರಮ್ಮ ಕಲ್ಲೇಗೌಡ) ಅಧ್ಯಕ್ಷ ಕುಂದೂರು ಅಶೋಕ್ ಹೇಳಿದ್ದಾರೆ.

ಚಿಕ್ಕಮಗಳೂರು ಕುಂಭಕ ಸಾಂಸ್ಕೃತಿಕ ಪ್ರತಿಷ್ಠಾನ, ಕರ್ನಾಟಕ ವಿಕಾಸ ರಂಗದಿಂದ ಪಟ್ಟಣದ ದಾನಿಗಳಾದ ಶ್ಯಾಮಲ ಮಂಜುನಾಥ್ ಅವರ ನಿವಾಸದಲ್ಲಿ ನಡೆದ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಿ 112 ವರ್ಷಗಳ ನೆನಪಿನ ಹಿನ್ನಲೆಯಲ್ಲಿ ಕನ್ನಡಕ್ಕಾಗಿ ದುಡಿದವರಿಗೆ ಸನ್ಮಾನ ನಡೆಯುತ್ತಿರುವುದು ಅರ್ಥಪೂರ್ಣ. ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಜನಪರರಾಗಿದ್ದವರು ಅಂತಹ ಮಹಾರಾಜರು ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿದರು. ಇಂತಹ ಪ್ರತಿಷ್ಠಿತ ಸಂಸ್ಥೆ ಸದಸ್ಯರಾಗುವುದು ಹೆಮ್ಮೆಯ ವಿಚಾರ ಎಂದು ಹೇಳಿದರು.



ತರೀಕೆರೆಯಲ್ಲಿ ಕುಂಭಕ ಸಾಂಸ್ಕೃತಿಕ ಪ್ರತಿಷ್ಠಾನದಿಂದ ನಡೆದ ಅಭಿನಂದನಾ ಸಮಾರಂಭದಲ್ಲಿ ದಾನಿಗಳಾದ ಶ್ಯಾಮಲ ಮಂಜುನಾಥ್, ಹಿರಿಯ ಪತ್ರಕರ್ತ ಅನಂತ ನಾಡಿಗ್ ಅವರನ್ನು ಅಭಿನಂದಿಸಲಾಯಿತು.

ಮಹಿಳೆಯರಲ್ಲಿ ಸಾಧನೆಯ ಗುರಿ ಇರುತ್ತದೆ. ದಾನಿಗಳಾದ ಶ್ಯಾಮಲ ಮಂಜುನಾಥ್ ಮತ್ತು ಅವರ ಪುತ್ರ ನವೀನ್ ಕುಮಾರ್ ನುಡಿದಂತೆ ನಡೆದು ಸಮಾಜಕ್ಕೆ ದಾರಿದೀಪವಾಗಿದ್ದಾರೆ. ತರೀಕೆರೆ ತಾಲೂಕು ಕಸಾಪಗೆ ನಿವೇಶನವನ್ನು ದಾನವಾಗಿ ನೀಡಿರುವುದು ಎಲ್ಲರಿಗೂ ಸಂತೋಷ ತಂದಿದೆ. ಹಿರಿಯ ಪತ್ರಕರ್ತ ಅನಂತ ನಾಡಿಗ್ ಅವರು ಸೌಜನ್ಯ ಮತ್ತು ಸರಳತೆಯಿಂದ 40 ವರ್ಷಗಳಿಂದ ಪ್ರಾಮಾಣಿಕವಾಗಿ ಪತ್ರಕರ್ತರಾಗಿ ಸೇವೆ ಸಲ್ಲಿಸಿ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಕನ್ನಡಶ್ರೀ ಬಿ.ಎಸ್.ಭಗವಾನ್ ಮಾತನಾಡಿ ದಾನಿಗಳಾದ ಶ್ಯಾಮಲ ಮಂಜುನಾಥ್ ನಿವಾಸ ಒಂದು ದೇವಸ್ಥಾನವಿದ್ದಂತೆ, ಅವರು ನಾಡು ನುಡಿ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ಕಟ್ಟಡ ನಿರ್ಮಿಸಲು ನಿವೇಶನ ದಾನ ಮಾಡಿದ್ದಾರೆ ಅವರು ನುಡಿದಂತೆ ನಡೆದಿದ್ದಾರೆ ಎಂದು ಹೇಳಿದರು.

ತಾಲೂಕು ಕಸಾಪ ನಿಕಟಪೂರ್ವ ಅಧ್ಯಕ್ಷ ಎಸ್.ಸುರೇಶ್ ಚಂದ್ರ ಮರೆಯುವ ಮುನ್ನ ವಿಷಯ ಕುರಿತು ಉಪನ್ಯಾಸ ನೀಡಿ ಮಾತನಾಡಿ, ದಾನಿಗಳುರು ನುಡಿದಂತೆ ನಡೆದು ತಾ.ಕನ್ನಡ ಸಾಹಿತ್ಯ ಪರಿಷತ್ತು ಕಟ್ಟಡ ನಿರ್ಮಾಣಕ್ಕೆ ನಿವೇಶನ ದಾನ ಮಾಡಿ ಆದರ್ಶ ಮೆರೆದಿದ್ದಾರೆ ಎಂದು ಅಭಿನಂದಿಸಿದರು.

ಹಿರೇಮಗಳೂರು ಪುಟ್ಟಸ್ವಾಮಿ ಮಾತನಾಡಿ ಹಿರಿಯ ಪತ್ರಕರ್ತ ಅನಂತ ನಾಡಿಗ್ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿರುವುದು ಹೆಮ್ಮೆಯ ವಿಷಯ ಎಂದರು. ಚಿಕ್ಕಮಗಳೂರು ಚಿಂತಕ ಡಿ.ಎಂ. ಮಂಜುನಾಥ ಸ್ವಾಮಿ ಮಾತನಾಡಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ವರ್ಷದ ನೆನಪಿನ ದಿನದಲ್ಲಿ ಇಂತಹ ಒಂದು ಅರ್ಥಪೂರ್ಣ ಕಾರ್ಯಕ್ರಮ ಎಲ್ಲರಿಗೂ ಸಂತೋಷ ತಂದಿದೆ ಎಂದು ಹೇಳಿದರು.

ದಾನಿಗಳಾದ ಶ್ಯಾಮಲ ಮಂಜುನಾಥ್ ಮಾತನಾಡಿ ಹಿರಿಯ ಸಾಹಿತಿ ಗೊ.ರು. ಚನ್ನಬಸಪ್ಪ ಅವರು ನಮ್ಮ ಕುಟುಂಬದ ಗೆಳೆಯರು. ಕನ್ನಡದ ದೊಡ್ಡ ದೊಡ್ಡ ವಿದ್ವಾಂಸರ ಜೊತೆ ನಾನಿರುವುದು ಹೆಮ್ಮೆಯ ವಿಷಯ ಎಂದರು.

ಪ್ರತಿಷ್ಠಾನದಿಂದ ದಾನಿಗಳಾದ ಶ್ಯಾಮಲ ಮಂಜುನಾಥ್, ಹಿರಿಯ ಪತ್ರಕರ್ತ ಅನಂತ ನಾಡಿಗ್ ಅವರನ್ನು ಅಭಿನಂದಿಸಲಾಯಿತು.

ತಾಲೂಕು ಕಸಾಪ ಅಧ್ಯಕ್ಷ ರವಿ ದಳವಾಯಿ, ಪ್ರಕೃತಿಶ್ರೀ ಕಲಾ ಕುಟೀರ ಅಧ್ಯಕ್ಷೆ ಉಮಾ ಪ್ರಕಾಶ್, ಕಸಾಪ ಮಹಿಳಾ ಘಟಕ ಅಧ್ಯಕ್ಷೆ ಸುನಿತಾ ಕಿರಣ್, ಜಿಲ್ಲಾ ಕಸಾಪ ಪ್ರಧಾನ ಸಂಚಾಲಕ ಇಮ್ರಾನ್ ಅಹಮದ್ ಬೇಗ್, ಸೈಯದ್ ಮುಹೀಬುಲ್ಲಾ, ನವೀನ್ ಕುಮಾರ್, ಡಿ.ಆರ್. ಹರ್ಷಿಣಿ ಭಾಗವಹಿಸಿದ್ದರು.

ಕನ್ನಡಪ್ರಭ
ಶನಿವಾರ 9.05.2026
ಶಿವಮೊಗ್ಗ

ಕಾನೂನಾತ್ಮಕ ಹೋರಾಟ, ಸತ್ಯಕ್ಕೆ ಸಂದ ಜಯ: ಡಾ.ಬಿ.ಶಿವಶಂಕರ್

ಶೃಂಗೇರಿ: ಅಂಚೆಮತಗಳ ಮರುಎಣಿಕೆ ನ್ಯಾಯಾಲಯದ ಆದೇಶದಂತೆ ಪ್ರಾಮಾಣಿಕವಾಗಿ ನಡೆದಿದೆ. ಡಿ.ಎನ್.ಜೀವರಾಜ್ ನ್ಯಾಯಯುತವಾಗಿ ಗೆದ್ದಿದ್ದಾರೆ. ಇದು ಕಾನೂನಾತ್ಮಕ ಹೋರಾಟ, ಸತ್ಯಕ್ಕೆ ಸಂದ ಜಯ ಎಂದು ರಾಜ್ಯ ಬಿಜೆಪಿ ಎಸ್ ಸಿ ಮೋರ್ಚಾ ವಕ್ತಾರ ಡಾ.ಬಿ.ಶಿವಶಂಕರ್‌ಹೇಳಿದರು.



ಪಟ್ಟಣದಲ್ಲಿ ಬಿಜೆಪಿ ಎಸ್.ಸಿ ಮೋರ್ಚಾ ಆಯೋಜಿಸಿದ್ದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿ 2023 ರ ಮೇ 13 ರಂದೇ ಜೀವರಾಜ್ ಗೆಲುವು ಸಾದಿಸಿದ್ದರು. 53 ಮತಗಳ ಅಂತರದಿಂದ ಜಯಗಳಿಸಿದ್ದರು. ಆದರೆ ಅಂಚೆಮತಗಳ ಬಂಡಲ್ ವ್ಯತ್ಯಾಸದಿಂದ 201 ಮತಗಳಿಂದ ಪಲಿತಾಂಶದಲ್ಲಿ ಸೋಲಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅಂದೇ ಮನವಿ ನೀಡಿದ್ದರೂ ಯಾವುದೇ ರೀತಿಯಲ್ಲಿ ಮರುಎಣಿಕೆ ಮಾಡದೇ ಇದ್ದರಿಂದ ಅನ್ಯಾಯವಾಗಿತ್ತು.

ಆದರೆ ಸತತ 3 ವರ್ಷಗಳ ಕಾನೂನು ಹೋರಾಟದ ಫಲವಾಗಿ ನ್ಯಾಯಾಲಯದ ಆದೇಶದಂತೆ ಮೇ 2 ರಂದು ನಡೆದ ಮರುಎಣಿಕೆಯಲ್ಲಿ ಗೆದ್ದು ಶಾಸಕರಾಗಿದ್ದಾರೆ. ಈಗ ಕಾಂಗ್ರೆಸ್ಸಿನವರು ಸುಳ್ಳು ಅಪಪ್ರಚಾರ ಮಾಡುತ್ತಿದ್ದಾರೆ. ಸ್ಟ್ರಾಂಗ್ ರೂಂ ಬಾಗಿಲು ಒಡೆದಿದ್ದಾರೆ. ಮತಪತ್ರಗಳ ಮೇಲೆ ಡಬಲ್ ಕ್ಲಿಕ್ ಮಾಡಿದ್ದಾರೆ. ಟ್ರಂಕ್ ಬೀಗ ಒಡೆದಿತ್ತು. ಅಲ್ಲಿ ಕಾವಲುಗಾರ ರಿರಲಿಲ್ಲವೇ, ಪೋಲೀಸ್ ವ್ಯವಸ್ಥೆಯಿರಲಿಲ್ಲವೇ, ಅದು ಅಲ್ಲದೇ ಸೋತ ಅಭ್ಯರ್ಥಿ ಜೀವರಾಜ್ ಇದನ್ನೆಲ್ಲ ಮಾಡಿಸಲು ಸಾದ್ಯವೇ.

203 ಮತಗಳ ಅಂತರದಿಂದ ರಾಜೇಗೌಡರು ಗೆದ್ದಿದ್ದಾರೆ ಎಂದಾಗ ವಿಜಯೋತ್ಸವ ಆಚರಿಸಿದರು. ಸತ್ಯಕ್ಕೆ ಸಂದ ಜಯ, ಸಂವಿಧಾನಕ್ಕೆ ಸಂದ ಜಯ ಎಂದರು. ಈಗ ಮೋಸ,ಅನ್ಯಾಯ ಎನ್ನುತ್ತಿದ್ದಾರೆ. ವೋಟ್ ಚೋರಿ, ವೋಟ್ ಡಕಾಯಿತಿ ಎನ್ನುತ್ತಿದ್ದಾರೆ. ಅವರು ಗೆದ್ದಾಗ ಇದೆಲ್ಲ ಅಲ್ಲವೇ.ಕಳೆದ ಮೂರು ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗಿದೆ. ಇನ್ನಾದರೂ ಅಭಿವೃದ್ದಿಗೆ ಜೀವರಾಜ್ ರವರಿಗೆ ಬೆಂಬಲಿಸಿ. ಜೀವರಾಜ್ ರವರು ಕೂಡ ಅಭಿವೃದ್ದಿಯತ್ತ ಗಮನ ಹರಿಸಿ, ರಾಜೇಗೌಡರು ಬಿಡುತ್ತಿಲ್ಲ ಎನ್ನುವಂತಾಗುವುದು ಬೇಡ ಎಂದರು.ಕೃಷ್ಣ ಸಾಲ್ಮರ ನೆಮ್ಮಾರ್,ರಮೇಶ್ ಮತ್ತಿತರರು ಇದ್ದರು.

ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಚಿಕ್ಕಮಗಳೂರು: ಮೆಟ್ರಿಕ್ ನಂತರದ ವಿವಿಧ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ 1 ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2025-26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಶುಲ್ಕ ಮರುಪಾವತಿ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ ಮೇ 16 ರವರೆಗೆ ವಿಸ್ತರಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಈ ಸೌಲಭ್ಯ ಸದುಪಯೋಗಪಡಿ ಸಿಕೊಳ್ಳಬಹುದು. ಹೆಚ್ಚಿನ ವಿವರಕ್ಕೆ ಇಲಾಖಾ ಸಹಾಯವಾಣಿ : 8050770004 ಸಂಪರ್ಕಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಂಟರ ಸಮುದಾಯದಲ್ಲಿ ಸಾಮರಸ್ಯ ಅತ್ಯಗತ್ಯ

• **ಕನ್ನಡಪ್ರಭ ವಾರ್ತೆ** ಬಾಳೆಹೊನ್ನೂರು

ಬಂಟರ ಸಮುದಾಯದಲ್ಲಿ ಒಗ್ಗಟ್ಟು, ಸಾಮರಸ್ಯ ಪ್ರಮುಖವಾಗಿದ್ದರೆ ಸಮುದಾಯ ಅಭಿವೃದ್ಧಿ ಸಾಧ್ಯ ಎಂದು ಬಂಟರ ಯುವ ವೇದಿಕೆ ಅಧ್ಯಕ್ಷ ಚಂದ್ರ ಶೇಖರ್‌ರೈ ಹೇಳಿದರು.

ಪಟ್ಟಣದ ಬಂಟರ ಯುವ ವೇದಿಕೆ ಆಯೋಜಿಸಿದ್ದ ಮೂರನೇ ವರ್ಷದ ವಾರ್ಷಿಕೋತ್ಸವ, ಕ್ರೀಡಾಕೂಟ, ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು. ಬಂಟರ ಸಮುದಾಯ ಬಾಂಧವರಲ್ಲಿ ಇತ್ತೀಚಿನ ದಿನಗಳಲ್ಲಿ ಒಗ್ಗಟ್ಟು ಕಡಿಮೆಯಾಗಿದೆ. ಕೆಲವು ಜನರಲ್ಲಿ ಒಣ ಪ್ರತಿಷ್ಠೆ, ಅಹಂ ಮನೋಭಾವನೆ ಎದ್ದು ಕಾಣುತ್ತಿದೆ. ಇದರಿಂದ ಸಮುದಾಯದ ಬಲ ಕಡಿಮೆಯಾಗಲಿದೆ ಎಂದರು.

ಈ ಹಿನ್ನೆಲೆಯಲ್ಲಿ ಸಮುದಾಯವನ್ನು ಒಗ್ಗೂಡಿಸಬೇಕು ಎಂಬ ಉದ್ದೇಶದಿಂದ ಬಂಟರ ಯುವ ವೇದಿಕೆ ವಿವಿಧ ಸಾಮಾಜಿಕ ಕಾರ್ಯಗಳೊಂದಿಗೆ ಸಮುದಾಯ ಒಗ್ಗೂಡಿಸುವ ಕೆಲಸ ಮಾಡುತ್ತಿದೆ. ಕಳೆದ 2 ವರ್ಷದಲ್ಲಿ ₹2.50 ಲಕ್ಷವನ್ನು ಸಮುದಾಯದಲ್ಲಿ ಅಗತ್ಯವುಳ್ಳವರಿಗೆ ನೀಡಲಾಗಿದೆ ಎಂದರು.

ಸಂಘದ ಅಧ್ಯಕ್ಷ ಪ್ರಭಾಕರಶೆಟ್ಟಿ ಮಾತ ನಾಡಿ, ಬಂಟರ ಸಮುದಾಯದ ಯುವಕರು, ಹಿರಿಯರು ಸಮ್ಮಿಲನಗೊಂಡು ಸಂಘಟನೆಯಲ್ಲಿ ಬೆರೆತಾಗ ಸಮುದಾಯ ಅಭಿವೃದ್ಧಿ ಸಾಧ್ಯವಿದೆ. ಈ ನಿಟ್ಟಿನಲ್ಲಿ ಯುವವೇದಿಕೆ, ಮಾತೃ ಸಂಘ ಕಾರ್ಯನಿರ್ವಹಿಸುತ್ತಿದೆ. ಯುವಕರ ಮೂಲಕ ಸಂಘಟನೆ ಬಲಪಡಿಸಿದಲ್ಲಿ ಸಂಘ ಸದೃಢಗೊಳ್ಳಲು ಸಾಧ್ಯವಿದೆ ಎಂದರು.



ಬಾಳೆಹೊನ್ನೂರಿನ ಬಂಟರ ಯುವ ವೇದಿಕೆಯಿಂದ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಚಂದ್ರಶೇಖರ್‌ರೈ, ಪ್ರಭಾಕರಶೆಟ್ಟಿ, ರಾ.ವೆಂಕಟೇಶ್, ಸನತ್ ಶೆಟ್ಟಿ, ರಾಘವೇಂದ್ರ ಶೆಟ್ಟಿ ಇದ್ದರು.

ಸಂಘದ ಪೂರ್ವಾಧ್ಯಕ್ಷ ರಾ.ವೆಂಕಟೇಶ್ ಮಾತನಾಡಿ, ಸಂಘಟನೆ ನಡೆಸಲು ಇಂದು ಬಹಳ ಕಷ್ಟಕರ. ಸಮುದಾಯದವರನ್ನು ಸೇರಿಸಲು ಶ್ರಮಪಡಬೇಕಿದೆ. ಎಂದರು.

ಉದ್ಯಮಿ ಆದಿತ್ಯಶೆಟ್ಟಿ ಮಾತನಾಡಿ, ಬಂಟ ಸಮುದಾಯದ ಯುವಕರಿಗೆ ಮಾರ್ಗದರ್ಶನ ಅಗತ್ಯವಾಗಿದೆ. ಶಿಕ್ಷಣ, ವೈದ್ಯಕೀಯ, ರಾಜಕೀಯ ಕ್ಷೇತ್ರಗಳಲ್ಲಿ ಸಮುದಾಯದವರು ಹಿಂದುಳಿದಿದ್ದಾರೆ. ಯುವಕರಿಗೆ ಶಿಕ್ಷಣದ ಬಗ್ಗೆ ಕಾರ್ಯಾಗಾರ ಏರ್ಪಡಿಸಿ ಮಾಹಿತಿ ನೀಡಬೇಕಿದೆ ಎಂದರು.

ಇದೇ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಅತ್ಯುನ್ನತ ದರ್ಜೆಗಳಿಸಿದ ವಿದ್ಯಾರ್ಥಿಗಳಾದ ಪೃಥ್ವಿಕ್ ಶೆಟ್ಟಿ, ಸ್ಕಂದ ಕೆ.ಶೆಟ್ಟಿ, ಸಾನ್ವಿ ಪಿ. ಶೆಟ್ಟಿ, ಅಮೋಘ್ ಶೆಟ್ಟಿ, ಸಾನ್ವಿತ ಶೆಟ್ಟಿ, ಎಚ್.ಎಸ್.ದಿಶಾ, ಸಾನಿಕಾ ವಿ.ಶೆಟ್ಟಿ, ಸಮರ್ಥ್ ಶೆಟ್ಟಿ, ಎಚ್.ಎನ್.ಅವಿನ್, ಅಮೂಲ್ಯ ಪಿ.ಶೆಟ್ಟಿ, ವಿ.ಸಾನಿಕಾ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಯುವ ವೇದಿಕೆ ಕಾರ್ಯದರ್ಶಿ ಬಿ.ಎಸ್.ಸನತ್ ಶೆಟ್ಟಿ, ಗೌರವಾಧ್ಯಕ್ಷ ಎಚ್.ಆರ್.ಆನಂದ್, ಶೃಂಗೇರಿ ಸಂಘದ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ಸಂದೀಪ್ ಶೆಟ್ಟಿ, ರಮೇಶ್ ಶೆಟ್ಟಿ ಮತ್ತಿತರರು ಹಾಜರಿದ್ದರು.

ಚಿಕ್ಕಮಗಳೂರು ವೈಶಿಷ್ಟ್ಯದ ಜಿಲ್ಲೆ: ತಮ್ಮಯ್ಯ

ಐಡಿಎಸ್‌ಜಿ ಕಾಲೇಜಿನಲ್ಲಿ ಚಿಕ್ಕಮಗಳೂರು ಇತಿಹಾಸ ಕುರಿತ 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಮಲೆನಾಡು ಹಾಗೂ ಬಯಲುಸೀಮೆ ಹೊಂದಿಕೊಂಡಿರುವ ಜಿಲ್ಲೆ ತನ್ನದೇಯಾದ ವಿಶಿಷ್ಟ ಇತಿಹಾಸ ಹೊಂದಿದೆ ಎಂದು ಶಾಸಕ ಎಚ್.ಡಿ.ತಮ್ಮಯ್ಯ ಹೇಳಿದರು.

ನಗರದ ಐಡಿಎಸ್‌ಜಿ ಕಾಲೇಜಿನಲ್ಲಿ ಶುಕ್ರವಾರ ಏರ್ಪಡಿಸಲಾದ ಚಿಕ್ಕಮಗಳೂರು ಇತಿಹಾಸ ದಾಖಲೆ ಕುರಿತ ಎರಡು ದಿನಗಳ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ ಸಾವಿರಾರು ವರ್ಷಗಳ ಇತಿಹಾಸವುಳ್ಳ ಹಿರೇಮಗಳೂರು ಕೋದಂಡರಾಮಚಂದ್ರ ಸ್ವಾಮಿ, ನಗರದ ಗೋಪಾಲಕೃಷ್ಣ ದೇವಸ್ಥಾನ ಹಾಗೂ ಮರ್ಲೆ ಗ್ರಾಮದಲ್ಲಿ ಕಲ್ಲಿನಿಂದಲೇ ನಿರ್ಮಿಸಿರುವ ಪುರಾತನ ದೇವಾಲ ಯ ಜಿಲ್ಲೆಯ ಸೊಗಬನ್ನು ಇನ್ನಷ್ಟು ಹೆಚ್ಚಿಸಿದೆ. ರಾಜ್ಯದಲ್ಲೇ ಅತ್ಯಂತ ದೊಡ್ಡ ಶಿಖರಮುಳ್ಳಯ್ಯ ನಗಿರಿ ಜಿಲ್ಲೆಯ ಸೌಂದರ್ಯ ಇಮ್ಮಡಿಗೊಳಿಸಿದೆ ಎಂದರು.

ಯುಗದ ಕವಿ ಕುವೆಂಪು ಅವರು ಜಿಲ್ಲೆಯ ಕೊಪ್ಪ ತಾಲೂಕಿನ ಹಿರೇಕೊಡಿಗೆ ಗ್ರಾಮದಲ್ಲಿ ಜನಿಸಿದವರು. ಜೊತೆಗೆ ಜಿಲ್ಲೆಯ ಕಾಫಿ ಇಡೀ ಪ್ರಪಂಚಕ್ಕೆ ಹೆಸರುವಾಸಿ. ಬೆಳವಾಡಿ ಗ್ರಾಮದ ವೀರನಾರಾಯಣ ಸ್ವಾಮಿ, ಉದ್ಭವ ಗಣಪತಿ ಹಾಗೂ ಅಮೃತೇಶ್ವರ ದೇವಾಲಯ ಪೂರ್ವಿಕರ ಇತಿಹಾಸ ತಿಳಿಸುತ್ತದೆ ಎಂದು ಹೇಳಿದರು.

ಹೊಯ್ಸಳ ಮತ್ತು ಚೋಳರ ಕಾಲದ ಪುರಾತನ ದೇವಾಲಯ, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾದ ಹೋರಾಟಗಾರರು ಹಾಗೂ ಜಿಲ್ಲೆಯ ಐತಿಹಾಸಿಕ ದಾಖಲೆಗಳ ಬಗ್ಗೆ ವಿದ್ಯಾರ್ಥಿಗಳು ಅರಿತುಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ, ಪಠ್ಯೇತರ ಚಟುವಟಿಕೆಗಳ ಬಗ್ಗೆ ಜ್ಞಾನಾರ್ಜನೆಗೆ ಅನುಕೂಲವಾಗಲು ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಜೀವನದ ಒಂದು ಭಾಗವಾಗಬೇಕು ಎಂದು ತಿಳಿಸಿದರು.

ಸ್ವಾತಂತ್ರ್ಯ ಚಳುವಳಿ ವೇಳೆ ಮಹಾತ್ಮಗಾಂಧೀಜಿ 1927ರ ಜನವರಿ ತಿಂಗಳಿನಲ್ಲಿ ಜಿಲ್ಲೆಗೆ ಭೇಟಿ ನೀಡಿರುವುದು ದೊಡ್ಡ ಇತಿಹಾಸ. ಮುಂಬರುವ ಜನವರಿಗೆ ಗಾಂಧೀಜಿ ಭೇಟಿ ನೀಡಿ ಶತಮಾನೋತ್ಸವ ಹಿನ್ನೆಲೆಯಲ್ಲಿ ಬೃಹತ್ ಮಟ್ಟದ ಕಾರ್ಯಕ್ರಮ, ಜಾಥಾ ಹಮ್ಮಿಕೊಂಡು ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಮಹತ್ಮರ ಜೀವನ ಚರಿತ್ರೆ ಪರಿಚಯಿಸಲಾಗುವುದು ಎಂದರು.

ಮನುಷ್ಯ ಉದ್ಯೋಗ ಅರಸಿ ದೇಶ, ವಿದೇಶಗಳಿಗೆ ತೆರಳಿದರೂ ಮೂಲ ಸ್ಥಾನ ಮರೆಯದೇ, ಸ್ಥಳದ ಮಹಿಮೆಯನ್ನು ಎಲ್ಲೆಡೆ ಪಸರಿಸಬೇಕು. ಇಡೀ ಪ್ರಪಂಚದಲ್ಲಿ ಭಾರತ ದೇಶ ಹಾಗೂ ಆಯಾ ಜಿಲ್ಲೆಯಲ್ಲಿ ಜನಿಸಿದ ಪ್ರತಿಯೊಬ್ಬರಿಗೆ ಯೋಗ್ಯ ಜೀವನ ಅಲ್ಲಿಯೇ ಲಭ್ಯವಾಗಲಿದೆ ಎಂದು ತಿಳಿಸಿದರು.



ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಶಾಸಕ ಎಚ್.ಡಿ.ತಮ್ಮಯ್ಯ ಉದ್ಘಾಟಿಸಿದರು.

- ವಿದ್ಯಾರ್ಥಿಗಳು ಹೊಯ್ಸಳ ಮತ್ತು ಚೋಳರ ಕಾಲದ ಪುರಾತನ ದೇಗುಲ, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾದ ಹೋರಾಟಗಾರರು ಹಾಗೂ ಜಿಲ್ಲೆಯ ಐತಿಹಾಸಿಕ ದಾಖಲೆ ಅರಿಯಲಿ
- ಇತಿಹಾಸ ಸಾರುವ ಜಿಲ್ಲೆಯ ಕಾಫಿ ಇಡೀ ಪ್ರಪಂಚಕ್ಕೆ ಪ್ರಸಿದ್ಧಿ ಬೆಳವಾಡಿಯ ವೀರನಾರಾಯಣ ಸ್ವಾಮಿ, ಉದ್ಭವ ಗಣಪತಿ, ಅಮೃತೇಶ್ವರ ದೇವಾಲಯ

ಪುರಾತತ್ವ ಇಲಾಖೆ ಉಪ ಅಧೀಕ್ಷಕ ಡಾ. ಎಚ್. ಆರ್.ದೇಸಾಯಿ ಮಾತನಾಡಿ, ಜಿಲ್ಲೆ ಪ್ರವಾಸಿ ಆಸಕ್ತಿ ವಿವಿಧ ಸ್ಥಳಗಳನ್ನು ಹೊಂದಿದೆ. ಎತ್ತರದ ಬೆಟ್ಟಗಳು, ವೇಗವಾಗಿ ಹರಿಯುವ ಮತ್ತು ಅಂಕುಡೊಂಕಾದ ನದಿಗಳು, ವಿವಿಧ ಧರ್ಮಯಾತ್ರಾ ಕೇಂದ್ರ, ವೈವಿಧ್ಯಮಯ ಪಕ್ಷಿ ಜೀವನ, ನಿತ್ಯಹರಿದ್ವರ್ಣ ಕಾಡು, ಜಾನಪದ ಸಂಪ್ರದಾಯಗಳನ್ನು ಹೊಂದಿದೆ ಎಂದು ಹೇಳಿದರು.

ಐಡಿಎಸ್‌ಜಿ ಕಾಲೇಜಿನ ಪ್ರಾಂಶುಪಾಲೆ ತಸ್ನೀಮ್ ಕೌಸರ್ ಮನಿಯಾರ್ ಮಾತನಾಡಿ, ರಾಜ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆ ವಿಶೇಷತೆಯನ್ನು ಹೊಂದಿದೆ. ಪೂರ್ವಿಕರ ಪುರಾತನ ಶಾಸನ, ಹೊಯ್ಸಳರ ಆಳ್ವಿಕೆಯಲ್ಲಿ ಕೆತ್ತಲಾದ ಕಲ್ಲಿನ ಶಿಲೆಗಳು ಜಿಲ್ಲೆಯ ಸಮಗ್ರವಾದ ಇತಿಹಾಸವನ್ನು ಪರಿಚಯಸುತ್ತದೆ ಎಂದರು.

ಈ ವೇಳೆ ಸಿಡಿಎ ಅಧ್ಯಕ್ಷ ಎಚ್.ಪಿ.ಮಂಜೇಗೌಡ, ಐಕ್ಯೂಎಸ್‌ಸಿ ಕೋಆರ್ಡಿನೇಟರ್‌ಗೋವರ್ಧನ್, ಮೈಸೂರು ವಿಭಾಗಿಯ ಪತ್ರಾಗಾರ ಕಚೇರಿ ಉಪ ನಿರ್ದೇಶಕ ಎಚ್.ಎಲ್.ಮಂಜುನಾಥ್, ಎಂ. ಲೋಕೇಶ್, ಇತಿಹಾಸ ವಿಭಾಗದ ಮುಖ್ಯಸ್ಥೆ ಪರ್ಜಾನ್ ಪರ್ವೀನ್ ಉಪಸ್ಥಿತರಿದ್ದರು.

ಪರಿಶ್ರಮದಿಂದ ಉತ್ತಮ ಫಲಿತಾಂಶ: ಪುದುವಾಳ್



ಶೃಂಗೇರಿ: ಶಿಕ್ಷಕ, ನೌಕರ ವೃಂದ, ಶಾಲಾ ಭಿವೃದ್ಧಿ ಸಮೀತಿ ಸದಸ್ಯರ ಶೈಕ್ಷಣಿಕ, ಮೂಲಭೂತಸೌರ್ಕಯಗಳ ಚಟುವಟಿಕೆಗಳಿಂದ ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ಸಾಧನೆಯಿಂದ ಉತ್ತಮ ಪಲಿತಾಂಶ ಬರುತ್ತಿದೆ ಎಂದು ಶೃಂಗೇರಿ ಸರ್ಕಾರಿ ಜೂನಿ.ರ್ ಕಾಲೇಜು ಅಭಿವೃದ್ದಿ ಸಮೀತಿ ಕಾರ್ಯಾಧ್ಯಕ್ಷ ಉಮೇಶ್ ಪುದುವಾಳ್ ಹೇಳಿದರು. ಅವರು ಪಟ್ಟಣದ ಸರ್ಕಾರಿ ಜೂನಿಯರ್‌ಕಾಲೇಜಿನಲ್ಲಿ ಆಯೋಜಿಸಿದ್ದ ಹಿರಿಯ ಸಿಡಿಸಿ ಸದಸ್ಯರಿಗೆ ಅಭಿನಂದನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಾಲೇಜು ಆರಂಭವಾದಾಗಿನಿಂದ ಪ್ರತೀ ವರ್ಷ ಒಳ್ಳೆಯ ಪಲಿತಾಂಶ ಲಭಿಸುತ್ತಿದೆ. ವಿಜ್ಞಾನ ವಿಭಾಗದಲ್ಲೂ ಉತ್ತಮ ಪಲಿತಾಂಶ ಬರುತ್ತಿದೆ. ಕಾಲೇಜಿನಲ್ಲಿ ಶೈಕ್ಷಣಿಕ, ಕ್ರೀಡಾ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿಯೂ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುತ್ತಿದ್ದಾರೆ. ಈ ವರ್ಷವೂ ಉತ್ತಮ ಪಲಿತಾಂಶ ಬಂದಿದೆ ಎಂದರು.

ಪ್ರಾಂಶುಪಾಲ ಅರುಣ್ ಕುಮಾರ್ ಮಾತನಾಡಿ ಕಾಲೇಜಿನಲ್ಲಿ ಕಲಿಕೆಗೆ ಉತ್ತಮ ವಾತಾವರಣವಿದೆ. ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಪ್ರವೇಶಾತಿ ಪಡೆದುಕೊಳ್ಳುತ್ತಿದ್ದಾರೆ. ನುರಿತ ಶಿಕ್ಷಕರಿಂದ ಉತ್ತಮ ಭೋದನೆ, ಗ್ರಂಥಾಲಯ ಎಲ್ಲಾ ಸೌಲಭ್ಯಗಳಿವೆ. ಶಾಲಾಭಿವೃದ್ಧಿ ಸಮೀತಿ, ಪೋಷಕರ ಸಹಕಾರ ಬಹುಮುಖ್ಯ ಎಂದರು. ಇದೇ ಸಂದರ್ಭದಲ್ಲಿ ಸೌಭಾಗ್ಯ ಗೋಪಾಲನ್, ವಿನುತಾರವರನ್ನು ಅಭಿನಂದಿಸಲಾಯಿತು. ಆದಿತ್ಯ ರಾವ್, ಮಹೇಶ್ ಕಾಕತ್ಕರ್ ಮತ್ತಿತರರು ಉಪಸ್ಥಿತರಿದ್ದರು.